# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:258 • ನೋಂದಣಿ ಸಂ.:KARKAN27911 • ವಿಜಯನಗರ • 09.03.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:258 • Reg.No:KARKAN27911 • VIJAYANAGARA • 09.03.2024 • Saturday • Page:04 • Rs:2


## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**09-03-2024 – ಶನಿವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ಸಿದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:42:23 |
| ಸೂರ್ಯಾಸ್ತ | : 18:32:33 |
| ರಾಹು | : 09:40–11:09 |
| ಯಮಘಂಡ | : 14:06–15:35 |
| ಗುಳಿಕ | : 06:42–08:11 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 08-03-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.43 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2242 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.612 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1601.72 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8202 ಕ್ಯುಸೆಕ್ |
| ಸಾಮರ್ಥ್ಯ | 23.827 ಟಿಎಂಸಿ |

# ಜಗದೆಲ್ಲೆಡೆ ಝೇಂಕರಿಸಿದ ಶಿವನಾಮ

## ಹಂಪಿಗೆ ಹರಿದು ಬಂದ ಜನಸಾಗರ । ರಾತ್ರಿಯಿಡಿ ಶಿವಸ್ಮರಣೆ ಜಾಗರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಅರಸರ ಆರಾಧ್ಯ ದೇವ, ವಿಶ್ವವಿಖ್ಯಾತ ಹಂಪಿಯಲ್ಲಿ ಶಿವರಾತ್ರಿ ನಿಮಿತ್ತ ಶುಕ್ರವಾರ ಬೆಳಿಗ್ಗೆ ಬ್ರಾಹ್ಮಿಮುಹೂರ್ತದಲ್ಲಿ ಶ್ರೀ ವಿರೂಪಾಕ್ಷೇಶ್ವರನಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಸಹಸ್ರನಾಮ, ಬಿಲ್ವಾರ್ಚನೆ, ನವರತ್ನಖಚಿತ ಚಿನ್ನದ ಮುಖಕಿರೀಟ ತೊಡಿಸಿ ಪುಷ್ಪಲಂಕರಾಗಳಿಂದ ಜಗದೊಡಯನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ,ನೆರೆ ರಾಜ್ಯಗಳಿಂದಲೂ ಭಕ್ತರು, ಪ್ರವಾಸಿಗರು ಬೇಸಿಗೆಯ ಬಿಸಿಲನ್ನು ಲೆಕ್ಕಿಸದೇ ಹಂಪಿಗೆ ಆಗಮಿಸಿ, ದೇವಸ್ಥಾನ ಆವರಣದಲ್ಲಿ ಸಾಲುಗಟ್ಟಿ ನಿಂತು ಲಕ್ಷಾಂತರ ಜನರು ಪಂಪಾ ವಿರೂಪಾಕ್ಷೇಶ್ವರ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ಮಹಾಶಿವರಾತ್ರಿಯ ಭಕ್ತರ ಭಕ್ತಿಯ ಸಂಭ್ರಮವನ್ನು ಕಣ್ತುಂಬಿಕೊಂಡ ವಿದೇಶಿಗರು ಇಲ್ಲಿನ ಸಂಪ್ರದಾಯಗಳನ್ನು ತಮ್ಮ ಕ್ಯಾಮರಗಳಲ್ಲಿ ಸೆರೆಹಿಡಿದು, ಸರತಿ ಸಾಲಿನಲ್ಲಿ ನಿಂತು ಶಿವಲಿಂಗ ದರ್ಶನ ಮಾಡಿ ಓಂ ನಮಃ ಶಿವಾಯ ಎಂದು ಶಿವನಾಮ ಪಠಿಸಿದರು.


ಹಂಪಿ ಅಂಗಳದ ಐತಿಹಾಸಿಕ ಬುಕ್ಕಸಾಗರ ಕಿನ್ನೂರೇಶ್ವರ, ಹೊಸಪೇಟೆ ಹೊರವಲಯದ ಲೋಹಾದ್ರಿ ಬೆಟ್ಟದ ಶ್ರೀ ಜಂಬುನಾಥೇಶ್ವರ, ನಾಗೇನಹಳ್ಳಿಯ ಓಬಳೇಶ್ವರ, ಹೊಸಪೇಟೆ ನಗರದ ಶ್ರೀ ಓಂಕಾರೇಶ್ವರ, ಮಾರ್ಕಂಡೇಶ್ವರ, ಶ್ರೀ ನೀಲಕಂಠೇಶ್ವರ, ಶ್ರೀ ನಗರೇಶ್ವರ ದೇವಸ್ಥಾನಗಳು ಸೇರಿದಂತೆ ವಿಜಯನಗರ ಜಿಲ್ಲೆಯ ಶಿವಾಲಯಗಳಲ್ಲಿ ಶಿವನಿಗೆ ಬಿಲ್ವಪತ್ರಿ, ಹೂ ಹಣ್ಣು ಸಮರ್ಪಿಸಿ ಶಿವರಾತ್ರಿಯ ಭಕ್ತಿಸೇವೆ ಸಲ್ಲಿಸಿದರು.



ಶಿವರಾತ್ರಿ ನಿಮಿತ್ತ ಹಂಪಿ ಶ್ರೀ ವಿರೂಪಾಕ್ಷೇಶ್ವ ಶಿವಲಿಂಗಕ್ಕೆ ರತ್ನಖಚಿತ ಚಿನ್ನದ ಮುಖ







ಹೊಸಪೇಟೆ ಶ್ರೀಓಂಕಾರೇಶ್ವರ ದೇವಸ್ಥಾನ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಮಹಾಶಿವರಾತ್ರಿ ನಿಮಿತ್ತ ಪಟ್ಟಣ ಹಾಗು ಹೋಬಳಿಯ ಶಿವಾಲಯಗಳಲ್ಲಿ ವಿಶೇಷ ರುದ್ರಾಭಿಷೇಕ, ಅಲಂಕಾರ, ಪೂಜಾವಿಧಿಗಳು ನಡೆದವು. ಪಟ್ಟಣದ ನೀಲಕಂಟೇಶ್ವರ, ನಾಣಿಕೇರಿ ವಿರೂಪಾಕ್ಷೇಶ್ವರ, ನಗರೇಶ್ವರ, ಹಳೆ ಊರು ಈಶ್ವರ, ಅನ್ನದಾನಿಶ್ವರಮಠ, ಗುರುಪಾದೇವರಮಠ, ದೇವಲಾಪುರದ ಗಾದಿಲಿಂಗೇಶ್ವರ, ಜಿ.ನಾಗಲಾಪುರದ ಶ್ರೀಗುರು ಒಪ್ಪತ್ತೇಶ್ವರಮಠ, ಡಣಾಯಕನಕೆರೆಯ ಪರಮೇಶ್ವರದೇವಸ್ಥಾನ, ಐತಿಹಾಸಿಕ ತಿಮ್ಮಲಾಪುರದ ತ್ರಿಕೂಟೇಶ್ವರ, ಜಪದಮಂಡೀಶ್ವರ ದೇವಲಯಗಳಲ್ಲಿ ಬೆಳಿಗ್ಗೆಯಿಂದಲೇ ಭಕ್ತರು ಸರದಿಸಾಲಿನಲ್ಲಿನಿಂತು ಈಶ್ವರನ ದರ್ಶನಪಡೆದರು.ಹಬ್ಬದ ನಿಮಿತ್ತ ಭಕ್ತರ ಉಪವಾಸದ ಹಿನ್ನೆಲೆಯಲ್ಲಿ ಹಣ್ಣು-ಹಂಪಲಗಳಿಗೆ ಬೇಡಿಕೆ ಹೆಚ್ಚಾಗಿತ್ತು.

# ಶಿವ ಮೂರನೇ ಕಣ್ತೆರೆದ ಸ್ಥಳ ಹಂಪಿ



ಭಾರತ ದೇಶದಲ್ಲಿ ಹಲವಾರು ಶಿವನ ದೇವಾಲಯಗಳಿದ್ದು ಎಲ್ಲಾ ಶಿವ ದೇವಾಲಯಗಳಿಗಿಂತ ಹಂಪಿಯಲ್ಲಿ ಇರುವ ಶ್ರೀ ವಿರೂಪಾಕ್ಷ ಸ್ವಾಮಿಯ ದೇವಾಲಯವು ಬಹಳ ವಿಶೇಷವು ಏಕೆಂದರೆ ಸ್ವತಹ ಶಿವ ಕೈಲಾಸ ಪರ್ವತವನ್ನು ಬಿಟ್ಟು ಇಲ್ಲಿಗೆ ಬಂದು ತಪಸ್ಸಿಗೆ ಕುಳಿತ ಜಾಗ ಹಂಪಿ. ದಕ್ಷ ಪ್ರಜಾಪತಿ ಮಾಡಿದ ದಕ್ಷಯಜ್ಞದಲ್ಲಿ ದಾಕ್ಷಾಯಿಣಿ ಅಮ್ಮನವರು ತಮ್ಮ ಆತ್ಮಾರ್ಪಣೆಯನ್ನು ಮಾಡಿಕೊಂಡ ನಂತರ ಶಿವ ದಾಕ್ಷಾಯಿಣಿ ದೇವಿಯನ್ನು ಕಳೆದುಕೊಂಡು ವಿರಹ ವೇದನೆಯನ್ನು ತಾಳಲಾರದೆ ಭೂಲೋಕವೆಲ್ಲ ಸುತ್ತುತ್ತ ಕೊನೆಗೆ ಹಂಪಿಗೆ ಬಂದಾಗ ಇಲ್ಲಿರುವ ತುಂಗಭದ್ರಾ ನದಿ, ಹೇಮಕೂಟ ಪರ್ವತ, ಮಾತಂಗ ಪರ್ವತ, ಅಂಜನಾದ್ರಿ ಪರ್ವತ ,ಋಷಿ ಮುಖ ಪರ್ವತ ಪರ್ವತ, ಎಲ್ಲದರ ನಡುವೆ ಪ್ರಶಾಂತವಾದ ಜಾಗದಲ್ಲಿ ಶಿವ ಕುಳಿತು ತಪಸ್ಸನ್ನು ಮಾಡುತ್ತಾ ಆತ್ಮಲೀನನಾಗುತ್ತಾನೆ. ಮುಂದಿನ ದಿನಗಳಲ್ಲಿ ತಾರಕಾಸುರ ಎಂಬ ರಾಕ್ಷಸನು ಶಿವ ಮತ್ತು ಪಾರ್ವತಿಗೆ ಜನಿಸುವ ಮಗನಿಂದ ನನಗೆ ಮರಣ ಬರಬೇಕು ಎಂದು ವರ ಪಡೆದು ತುಂಬ ದುಷ್ಟನಾಗಿ ದೇವತೆಗಳಿಗೆ ಸಜ್ಜನರಿಗೆ ತೊಂದರೆ ಕೊಡಲು ಪ್ರಾರಂಭಿಸುತ್ತಾನೆ. ಇದರಿಂದ ನೊಂದ ದೇವತೆಗಳು ದೇವಿಯ ಬಳಿಗೆ ಹೋಗಿ ಪ್ರಾರ್ಥಿಸಿ ವಿಷಯವನ್ನು ತಿಳಿಸಿ ದೇವಿಗೆ ನೀನು ಮತ್ತೆ ಅವತಾರಿಸಬೇಕೆಂದು ಹೇಳಿ ಪ್ರಾರ್ಥಿಸಿಕೊಳ್ಳುತ್ತಾರೆ. ದೇವತೆಗಳ ಪ್ರಾರ್ಥನೆಗೆ ಒಪ್ಪಿದ ದೇವಿಯು ಪರ್ವತರಾಜನ ಮಗಳಾಗಿ ಪಾರ್ವತಿಯಾಗಿ ಅವತರಿಸಿ ಬರುತ್ತಾರೆ. ಪಾರ್ವತಿ ದೇವಿಯು ಶಿವನನ್ನು ಪತಿಯನ್ನಾಗಿ ಪಡೆಯಲು ಪಂಪಾ ಸರೋವರದ ಬಳಿ ತಪಸ್ಸನ್ನು ಮಾಡಲು ಪ್ರಾರಂಭಿಸುತ್ತಾರೆ ಇಷ್ಟು ವರ್ಷಗಳು ಕಳೆದರೂ ಅವರ ತಪಸ್ಸಿಗೆ ಶಿವನು ಪ್ರತ್ಯಕ್ಷನಾಗುವುದಿಲ್ಲ. ಇಲ್ಲಿ ಶಿವ ತಪಸ್ಸಿಗೆ ಕುಳಿತ, ಅಲ್ಲಿ ದೇವಿ ತಪಸಿಗೆ ಕುಳಿತಳು. ತಾರಕಾಸುರನ ಅಟ್ಟಹಾಸವು ಕೂಡ ಮಿತಿಮೀರಿ ಹೋಗಿರುತ್ತದೆ. ಕೊನೆಗೆ ಶಿವನನ್ನು ತಪಸ್ಸಿನಿಂದ ಎಬ್ಬಿಸಬೇಕೆಂದು ದೇವತೆಗಳು ನಿರ್ಧರಿಸುತ್ತಾರೆ ಆದರೆ ಆ ಧೈರ್ಯ ಯಾರಿಗೂ ಇರುವುದಿಲ್ಲ ಕೊನೆಗೆ ಒಂದು ಉಪಾಯವನ್ನು ಮಾಡಿ ವಸಂತರಾಜನಾದ ಮನ್ಮಥನನ್ನು ಕರೆದುಕೊಂಡು ಶಿವನ ಮನಸ್ಸಿನಲ್ಲಿ ಕಾಮ ಪ್ರಚೋದನೆ ಆಗುವಂತೆ ಬಾಣಗಳನ್ನು ಬಿಟ್ಟು ಶಿವ ಜಾಗೃತನಾಗುವಂತೆ ಮಾಡುತ್ತಾರೆ. ತಪಸ್ಸಿಗೆ ಕುಳಿತಿದ್ದ ಶಿವ ಕೋಪದಿಂದ ತನ್ನ ಮೂರನೇ ಕಣ್ಣನ್ನು ತೆಗೆದು ಕಾಮನನ್ನು ದಹನ ಮಾಡುತ್ತಾನೆ ವಿರೂಪ ಎಂದರೆ ಕೋಪ ಅಕ್ಷ ಎಂದರೆ ಕಣ್ಣು ಕೋಪದಿಂದ ಮೂರನೇ ಕಣ್ಣನ್ನು ತೆಗೆದು ಕಾಮನನ್ನು ದಹನ ಮಾಡಿದ ಕಾರಣ ಹಂಪಿಯ ಶಿವನಿಗೆ ವಿರೂಪಾಕ್ಷ ಎಂಬ ಹೆಸರು ಬಂದಿದೆ ದೇವತೆಗಳು ಶಿವನನ್ನು ಶಾಂತವಾಗವಂತೆ ಪ್ರಾರ್ಥಿಸಿ ವಿಷಯವನ್ನು ತಿಳಿಸುತ್ತಾರೆ ಪ್ರಾರ್ಥನೆಗೆ ಒಪ್ಪಿದ ಶಿವನು ನನಗೆ ಸರಿಯಾದ ಕನ್ಯೆ ಯಾರು ಎಲ್ಲಿದ್ದಾಳೆ ಎಂದು ಪ್ರಶ್ನೆಸುತ್ತಾರೆ. ದೇವತೆಗಳು ದಾಕ್ಷಾಯಿಣಿ ಅಮ್ಮನವರು ಪರ್ವತರಾಜನ ಮಗಳಾಗಿ ಪಾರ್ವತಿಯಾಗಿ ಮತ್ತೆ ಅವತರಿಸಿದ್ದಾರೆ ನೀವು ಅವರ ವಿವಾಹವಾಗಬೇಕೆಂದು ಕೇಳಿಕೊಳ್ಳುತ್ತಾರೆ ದೇವತೆಗಳ ಮಾತಿಗೆ ಒಪ್ಪಿದ ಶಿವನು ಪಾರ್ವತಿ ದೇವಿಯನ್ನು ವಿವಾಹವಾಗುತ್ತಾರೆ. ಗಿರಿಜಾ ಕಲ್ಯಾಣ ನಡೆದ ಜಾಗವೇ ಹಂಪಿ ಕ್ಷೇತ್ರ. ಮುಂದಿನ ದಿನಗಳಲ್ಲಿ ಇವರಿಗೆ ಮಗನಾಗಿ ಜನಿಸಿದ ಕುಮಾರಸ್ವಾಮಿ ತಾರಕಾಸುರನನ್ನು ಸಂಹರಿಸುತ್ತಾನೆ ಈಗಿನ ಸಂಡೂರು ಸ್ಕಂದಗಿರಿ ಶ್ರೀ ಕುಮಾರಸ್ವಾಮಿಯ ಜನ್ಮಸ್ಥಳ. ಕುಮಾರಸ್ವಾಮಿಯು ಸುತ್ತಮುತ್ತಲಿರುವ ಕಬ್ಬಿಣದ ಅಂಶಗಳಿಂದ ಆಯುಧಗಳನ್ನು ತಯಾರಿಸಿಕೊಂಡು ತಮಿಳುನಾಡಿನ ಪಳಿನಿ ಕ್ಷೇತ್ರದಲ್ಲಿ ತಾರಕಾಸುರನ ಜೊತೆ ಯುದ್ಧ ಮಾಡಿ ಅವನನ್ನು ಸಂಹರಿಸುತ್ತಾರೆ. ಈ ಹಂಪಿ ಕ್ಷೇತ್ರಕ್ಕೆ ದಕ್ಷಿಣ ಕಾಶಿ ಎಂಬ ಹೆಸರು ಇದೆ ಸ್ವತಃ ಶಿವನೇ ಇಲ್ಲಿ ತಪಸ್ಸು ಮಾಡಿರುವ ಜಾಗ ಇಂತಹ ಪವಿತ್ರವಾದ ಕ್ಷೇತ್ರದಲ್ಲಿ ಶಿವರಾತ್ರಿ ಹಬ್ಬವನ್ನು ಬಹಳ ಸಂಭ್ರಮದಿಂದ ಭಕ್ತಾದಿಗಳು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ ಸ್ವಾಮಿಯ ದರ್ಶನವನ್ನು ಪಡೆದು ಪುನೀತರಾಗುತ್ತಾರೆ. ಹಂಪಿಯಲ್ಲಿ ಮಾರ್ಗಶಿರ ಮಾಸ ಕೃಷ್ಣ ಪಕ್ಷ ಬಿದಿಗೆ ದಿನ ವಿರುಪಾಕ್ಷಸ್ವಾಮಿಗೂ ಮತ್ತು ಅಮ್ಮನವರಿಗೂ ನಿಶ್ಚಿತಾರ್ಥ ಕಾರ್ಯಕ್ರಮ ನಡೆಯುತ್ತದೆ ಅದಕ್ಕೆ ಫಲಪೂಜಾ ಮಹೋತ್ಸವ ಎಂದು ಕರೆಯುತ್ತಾರೆ. ಚೈತ್ರ ಶುದ್ಧ ತ್ರಯೋದಶಿ ದಿನ ಶಿವನಿಗೂ ಮತ್ತು ಪಾರ್ವತಿಗೂ ವಿವಾಹ ಮಾಡಿ ಚೈತ್ರ ಶುದ್ಧ ಹುಣ್ಣಿಮೆ ದಿನ ರಥೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ ಇಂತಹ ಪವಿತ್ರವಾದ ಕ್ಷೇತ್ರದಲ್ಲಿ ಶಿವನ ದರ್ಶನ ಮಾತ್ರದಿಂದಲೇ ನಮ್ಮ ಎಲ್ಲ ಪಾಪಗಳು ಕಳೆದು ನಾವು ಪುನೀತರಾಗುತ್ತೇವೆ. ಕ್ಷೇತ್ರಾಧಿಪತಿಯಾದ ಶ್ರೀ ಪಂಪಾಂಬ ಸಹಿತ ವಿರೂಪಾಕ್ಷ ಸ್ವಾಮಿಯು ಎಲ್ಲ ಸದ್ಭಕ್ತರಿಗೆ ಆಯಸ್ಸು ಆರೋಗ್ಯ ಐಶ್ವರ್ಯ ಎಲ್ಲವನ್ನು ಕೊಟ್ಟು ಒಳ್ಳೆಯದನ್ನು ಮಾಡಲಿ. ಲೋಕಾ: ಸಮಸ್ತಾ: ಸುಖಿನೋ ಭವಂತು.




**– ಗುರುನಾಥ ಮೋಹನ್‌ಜೋಷಿ, ಕ್ಷೇತ್ರ ಪುರೋಹಿತರು, ಹಂಪಿ.**

## ಮೈಕ್ರೋ ನ್ಯೂಸ್

### ಸರ್ಕಾರಿ ಸೌಲಭ್ಯಗಳು ಕಾರ್ಮಿಕರಿಗೆ ಪ್ರಮಾಣಿಕವಾಗಿ ದೊರೆಯಲಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸರ್ಕಾರದ ಸೌಲಭ್ಯಗಳು ಪ್ರಮಾಣಿಕವಾಗಿ ನಿತ್ಯ ಕಾಯಕದಲ್ಲಿರುವ ಕಾರ್ಮಿಕರಿಗೆ ದೊರೆಯಬೇಕು ಎಂದು ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ತಾಲೂಕು ಪದಾಧಿಕಾರಿಗಳು ಕಾರ್ಮಿಕ ಇಲಾಖೆಯ ತಾಲೂಕು ಅಧಿಕಾರಿಗೆ ಮನವಿ ಸಲ್ಲಿಸಿದರು.

ಬಳಿಕ ತಾಲೂಕು ಅಧ್ಯಕ್ಷ ಎಚ್. ಖಾಜಾಹುಸೇನ್ ಮಾತನಾಡಿ, ಸಮಾಜದಲ್ಲಿ ತುಳಿತಕ್ಕೊಳಗಾದವರು ಎಂದರೆ ಕಾರ್ಮಿಕರು. ಹಗಲಿರುಳು ದುಡಿಯುವ ವರ್ಗ ಕಾರ್ಮಿಕರು ತಮ್ಮ ಕಾಯಕವನ್ನು ಬಿಟ್ಟು, ಸೌಲಭ್ಯಕೋರಿ ನಿಮ್ಮ ಕಚೇರಿಗೆ ಬಂದರೆ, ಅವರನ್ನು ಅಲೆದಾಡಿಸದೆ, ಕೆಲಸ ಮಾಡಿಕೊಡಬೇಕು ಎಂದು ಮನವಿ ಸಲ್ಲಿಸಿದರು.

ಈ ಸಂಚಾಲಕರಾದ ಎಂ.ಮಹಾಂತೇಶ, ಪದಾಧಿಕಾರಿಗಳಾದ ಸಿ.ಕರಿಬಸವರಾಜ್, ಅಂಜಿನಪ್ಪ, ಗೋವಿಂದಪ್ಪ, ಯು. ಗಣೇಶ, ಶಮ್ಮೀರ್, ಶೇಖರಪ್ಪ, ವೀರೇಶ ಮತ್ತಿತರರಿದ್ದರು.



# ಅಧಿಕಾರಿಗಳು ನಿರ್ಲಕ್ಷ್ಯವಹಿಸಿದರೆ ಸಹಿಸುವುದಿಲ್ಲ

## ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಖಡಕ್ ಸೂಚನೆ । ತಾಲೂಕು ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ಜನರಿಗೆ ಕುಡಿಯುವ ನೀರು ಹಾಗು ಜಾನುವಾರುಗಳಿಗೆ ಮೇವು ನೀರು ಒದಗಿಸಲು ಮುಂದಾಗಬೇಕು. ಏನೇ ಸಮಸ್ಯೆಗಳಿದ್ದರು ನನ್ನೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ವಿನಾಕಾರಣ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದರೆ ಸಹಿಸುವುದಿಲ್ಲ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಖಡಕ್ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ತಾಲೂಕು ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು. ಪ್ರಸಕ್ತ ಸಾಲಿನಲ್ಲಿ ಮಳೆ ಬಾರದೆ ತಾಲೂಕಿನಾದ್ಯಂತ ಬರ ಆವರಿಸಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಎದುರಾಗದಂತೆ ಸಂಭಂದಿಸಿದ ಅಧಿಕಾರಿಗಳು ಜಾಗ್ರತೆವಹಿಸಿ ಕಾರ್ಯ ನಿರ್ವಹಿಸಬೇಕು. ಕ್ಷೇತ್ರದ ಯಾವುದೇ ಗ್ರಾಮದಿಂದಲೂ ನನಗೆ ದೂರು




ಬರದಂತೆ ಸೌಲಭ್ಯ ಒದಗಿಸಬೇಕು. ನೀರಿಗೆ ತೊಂದರೆ ಉದ್ಭವಿಸಿದರೆ, ಗ್ರಾಮದಲ್ಲಿನ ರೈತರ ಕೊಳವೆ ಬಾವಿಗಳಿಂದ ಅವರ ಮನವೊಲಿಸಿ ನೀರು ಪಡೆಯಿರಿ, ಇಲ್ಲವೇ ಈಗಾಗಲೇ ಡಿಸಿ ಅವರೊಂದಿಗೆ ಚರ್ಚಿಸಿ ಕುಡಿಯುವ ನೀರಿಗೆ ಕೊಳವೆ ಬಾವಿ ಕೊರೆಸಲು ಹಣ ಬಿಡುಗಡೆಗೆ ಚರ್ಚಿಸಿದ್ದು ಅವರು ಸಹ ಸಮ್ಮತಿ ನೀಡಿದ್ದಾರೆ ಎಂದು ತಿಳಿಸಿದರು. ಇನ್ನೂ ಶೀಘ್ರದಲ್ಲೇ ಗಂಡ ಬೊಮ್ಮನಹಳ್ಳಿ ಬಳಿ ಗೋಶಾಲೆ ಪ್ರಾರಂಭ ಮಾಡುಲಾಗುವುದು. ನಂತರದ ದಿನಗಳಲ್ಲಿ ಪೂಜಾರಹಳ್ಳಿ ಹಾಗೂ ಕೂಡ್ಲಿಗಿ ಬಳಿ ಗೋ ಶಾಲೆ ನಿರ್ಮಾಣ ಮಾಡುವುದಾಗಿ ತಿಳಿಸಿದರು. ಚುನಾವಣಾ ನೆಪವೊಡ್ಡಿ ಜನರಿಗೆ ಕುಡಿಯುವ ನೀರಿಗೆ ತೊಂದರೆ ಮಾಡಿದರೆ ಶಿಸ್ತು ಕ್ರಮ ಮುಂದಾಗುವೆ ಎಂದು ಎಚ್ಚರಿಕೆ ನೀಡಿದರು. ಜಲ ಜೀವನ್ ಮಿಷನ್ ಕಾಮಾಗಾರಿ ಪ್ರಗತಿಯಲ್ಲಿದ್ದು ಜನರಿಗೆ ತೊಂದರೆ ಎದುರಾಗದಂತೆ ನೀರು ಪೂರೈಕೆಯಾಗುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು. ಈಗಾಗಲೇ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಪಟ್ಟಿ ಮಾಡಿ ರಸ್ತೆ, ವಸತಿ, ಆರೋಗ್ಯ ಹಾಗೂ ಶಿಕ್ಷಣಕ್ಕೆ ಬೇಕಾದ ಸೌಲಭ್ಯಗಳಿಗೆ ರೂಪುರೇಷೆ ತಯಾರು ಮಾಡಿಕೊಂಡ ಹಣವನ್ನು ಸಹ ಮಂಜೂರು ಮಾಡಿಸಿರುವೆ. ಯಾವುದೇ ಕಾರಣಕ್ಕೂ ಅಭಿವೃದ್ಧಿ ವಿಷಯದಲ್ಲಿ ಹಿನ್ನಡೆಯಾಗದಂತೆ ನೋಡಿ ಕೊಳ್ಳಲಿದ್ದು ಇದಕ್ಕೆ ತಾಲೂಕು ಮಟ್ಟದ ಅಧಿಕಾರಿಗಳು ಸಹ ಕೈ ಜೋಡಿಸಿ ಸಹಕಾರ ನೀಡಬೇಕು ಎಂದು ತಿಳಿಸಿದರು. ಎಸ್ಸಿ,ಎಸ್ಟಿ ವಸತಿ ನಿಲಯಗಳ ಮೂಲ ಸೌಕರ್ಯಗಳಿಗೆ ಹಣ ಬಿಡುಗಡೆಯಾಗಿದ್ದು. ತ್ವರಿತವಾಗಿ ಕೆಲಸ ಪೂರೈಸಲಾಗುವುದು. ಉಳಿದಂತೆ ಈಗಾಗಲೇ ಮೂರು ವಸತಿ ಶಾಲೆಗಳು ಆರಂಭಿಸಲು ಸರ್ಕಾರದಿಂದ ಹಣ ಬಂದಿದೆ, ಅದರಂತೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆಗಳಿಗೆ ಶುದ್ದ ಕುಡಿಯುವ ನೀರು ಹಾಗೂ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ 31 ಕೋಟಿ ಮಂಜೂರಾಗಿದೆ ಎಂದು ತಿಳಿಸಿದರು. ಉಳಿದಂತೆ ನೀರಾವರಿ,ವಸತಿ, ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳ ಜತೆ ಚರ್ಚಿಸಿದರು. ತಾಪಂ ಇಒ ವೈ. ರವಿಕುಮಾರ್ ಸೇರಿದಂತೆ ಗ್ರಾಪಂ ಪಿಡಿಒಗಳು ಸಭೆಯಲ್ಲಿ ಭಾಗಿಯಾಗಿದ್ದರು.




## ವಚನ ಅರಿವು

### ಕಾಯಕ ನಿಷ್ಠೆ

**ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,**
**ಲಿಂಗಪೂಜೆಯಾದಡೂ ಮರೆಯಬೇಕು,**
**ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.**
**ಕಾಯಕವೆ ಕೈಲಾಸವಾದ ಕಾರಣ.**
**ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.**

**– ಆಯ್ದಕ್ಕಿ ಮಾರಯ್ಯ**

ಕಾಯಕವೆಂದರೆ ದೇಹ, ಮನಸ್ಸು ಕೂಡಿಸಿ ನಿಷ್ಠೆ, ಪ್ರಾಮಾಣಿಕತೆ, ಮಾನವೀಯ ಮೌಲ್ಯವನ್ನೊಳಗೊಂಡ ಯಾವುದೇ ವೃತ್ತಿಯಲ್ಲಿ ದುಡಿದು, ಬಂದ ಫಲದಲ್ಲಿ ಜೀವನ ಸಾಗಿಸುವುದು. ಮಿಕ್ಕ ಭಾಗ ಅಥವ ಒಂದಷ್ಟು ಅಂಶದ ಹಣ, ಆಹಾರ, ವಸ್ತು ಮುಂತಾದುವುಗಳನ್ನು ಸಮಾಜಕ್ಕೆ ದಾಸೋಹ ಮಾಡುವುದನ್ನು ಕಾಯಕವೆಂದು ತಿಳಿಯಲಾಗಿದೆ.

ಗುರು ಲಿಂಗ ಜಂಗಮ ಸೇವೆಗಿಂತಲೂ ಕಾಯಕನಿಷ್ಠೆ ಮಿಗಿಲಾದುದು. ಕಾಯಕ ಮಾತ್ರದಿಂದಲೇ ಮೋಕ್ಷ ಸಾಧಿಸಬಹುದು ಎಂದು ಹೇಳುತ್ತಾನೆ ಆಯ್ದಕ್ಕಿ ಮಾರಯ್ಯ. ಕಾಯಕದಲ್ಲಿ ತೊಡಗಿದಾಗ ಅದಕ್ಕೆ ಅಡ್ಡಿಯಾಗುವವರು ಗುರುವಾದರೂ ಮರೆಯಬೇಕು. ಜಂಗಮ ಮುಂದಿದ್ದರೂ ಆತನ ಹಂಗು ತೊರೆಯಬೇಕು. ಅಷ್ಟೇ ಅಲ್ಲ ಶಿವನೂ ಕೂಡ ಕಾಯಕದಿಂದ ಹೊರಗಲ್ಲ ಹಾಗಾಗಿ ಕಾಯಕವೆ ಕೈಲಾಸ. ಇದು ಕಾಯಕನಿಷ್ಠೆಯ ವಿಶೇಷವೂ ಹೌದು. ಕಾಯಕದ ಮಹತ್ವವನ್ನು ತಿಳಿದು ಅನುಸರಿಸಿ ಬದುಕಬೇಕು ಎನ್ನುತ್ತಾನೆ ಮಾರಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನ್ಯಾನೋ ಕಥೆ

### ದುರಾಸೆಯ ಫಲ

ಒಂದಾನೊಂದು ಊರಿನಲ್ಲಿ ಮಾದಪ್ಪನೆಂಬ ಮರಗೆಲಸದವನಿದ್ದ ಅವನು ಬಹಳ ಆಸೆಬುರುಕನಾಗಿದ್ದ ಅವನು ಯಾರ ಮನೆಯ ಕಿಟಿಕಿ ಬಾಗಿಲುಗಳನ್ನು ಮಾಡಿದರೂ ಮನೆಯವರಿಗೆ ಗೊತ್ತಾಗದಂತೆ ಕೆಲವೊಂದು ಕಟ್ಟಿಗೆಗಳನ್ನು ಕದ್ದು ಒಯ್ಯುತ್ತಿದ್ದ ಅದನ್ನೆಲ್ಲಾ ತನ್ನ ಮನೆಯ ಒಂದು ಕೋಣೆಯಲ್ಲಿ ಕೂಡಿಸಿ ಇಡುತ್ತಿದ್ದ ಅವನ್ನು ಹೆಚ್ಚು ಬೆಲೆಗೆ ಮಾರಿಕೊಳ್ಳುತ್ತಿದ್ದ ಅದನ್ನು ಕಂಡ ಮಾದಪ್ಪನ ಮಡದಿ ಈ ರೀತಿ ಪಾಪದ ದುಡಿಮೆ ಮಾಡಬೇಡಿ ಇದರ ಫಲ ನಾವು ಅನುಭವಿಸಬೇಕಾಗುತ್ತದೆ ಎಂದು ಹೇಳಿದರೂ ಕೇಳುತ್ತಿರಲಿಲ್ಲ ಹೀಗಿರುವಾಗ ಒಂದು ದಿನ ಮಾದಪ್ಪ ಮತ್ತು ಆತನ ಮಡದಿ ಬೇರೆ ಊರಿಗೆ ಬಂಧುಗಳ ಮದುವೆಗಾಗಿ ಮನೆಗೆ ಬೀಗ ಹಾಕಿ ಹೋದರು. ಮಾದಪ್ಪನ ಮನೆಯ ಪಕ್ಕದಲ್ಲಿ ಒಂದು ಗುಡಿಸಲು ಇದ್ದು ಅಲ್ಲಿದ್ದ ಕುಟುಂಬದವರು ರಾತ್ರಿ ಅಡುಗೆ ಮಾಡುವಾಗ ಆಕಸ್ಮಿಕವಾಗಿ ಒಂದು ಕಿಡಿ ಹಾರಿ ಇಡೀ ಗುಡಿಸಲೇ ಧಗ ಧಗ ಉರಿಯಲು ಆ ಬೆಂಕಿಯ ನಾಲಿಗೆ ಮಾದಪ್ಪನ ಮನೆಯನ್ನು ಅವರಿಸಿತು ಅಲ್ಲಿದ್ದ ವಸ್ತುಗಳ ಜೊತೆಗೆ ಮಾದಪ್ಪ ಕೂಡಿಸಿ ಇಟ್ಟಿದ್ದ ಎಲ್ಲಾ ಕೆಟ್ಟಿಗೆಗಳು ಹುರಿದು ಬೂದಿಯಾಯಿತು. ಊರಿನಿಂದ ಬಂದ ಮಾದಪ್ಪ ಮತ್ತು ಅವನ ಮಡದಿ ಪರಿಸ್ಥಿತಿಯನ್ನು ಅರಿತರು ಆದ ದುರಂತ ಆಕಸ್ಮಿಕವಿರಬಹುದು ಆದರೆ ಪರರ ವಸ್ತುಗಳನ್ನು ತನ್ನದೆಂದು ಭಾವಿಸಿ ಲಾಭಮಾಡಬೇಕು ಎಂಬ ಹುಚ್ಚುಆಸೆ ಮಾದಪ್ಪನ ಮನೆ ಮತ್ತು ಮನೆಯಲ್ಲಿದ್ದ ಎಲ್ಲವನ್ನು ಕಳೆದುಕೊಳ್ಳುವಂತೆ ಮಾಡಿತು ಆಸೆ ಇರಬೇಕು ಆದರೆ ದುರಾಸೆ ಇರಬಾರದು

– ಬಸವರಾಜೇಶ್ವರಿ ಜಿ.ಆರ್.
ಹವ್ಯಾಸಿ ಬರಹಗಾರರು, ಹಗರಿಗಜಾಪುರ,

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

**ಬರಹಗಾರರ ಒತ್ತಾಸೆಯ ಮೇರೆಗೆ ಬೆಳಕಿನ ಹಾದಿ ಕಾಲಂ ಆರಂಭಿಸಲಾಗಿದೆ. 250 ಪದಗಳು ಮೀರದಂತೆ ನೀವು ಬರೆದು ಕಳುಹಿಸಬಹುದು. ಯುವ ಬರಹಗಾರರಿಗೆ ವೇದಿಕೆ ಸಿದ್ಧವಿದೆ, ಬರವಣಿಗೆ ನಿಮ್ಮದಾಗಲಿ...**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಬೇಸಿಗೆ ರಜೆ ಅಂದು! ಇಂದು!

ಈಗ ನಮ್ಮ ಮಕ್ಕಳಿಗೆಲ್ಲ ಪರೀಕ್ಷಾ ಹಬ್ಬದ ಸಮಯ. ಪರೀಕ್ಷೆ ಮುಗಿದ ಕೆಲ ದಿನಗಳಲ್ಲಿ ಮಕ್ಕಳಿಗೆ ಬೇಸಿಗೆ ರಜೆಯನ್ನು ನೀಡಲಾಗುತ್ತದೆ. ಬೆಸಿಗೆ ರಜೆ ಬಂದಾಗ ಮಕ್ಕಳ ಆನಂದ ವರ್ಣಿಸಲಸದಳ. ನಮ್ಮ ಶಾಲಾ ಮಕ್ಕಳು ವರ್ಷಪೂರ್ತಿ ಮಕ್ಕಳೆಲ್ಲಾ ತಮ್ಮ ಶಾಲೆ, ಓದು, ಬರಹ, ಮನೆಗೆಲಸ, ಶಿಕ್ಷಕರ ಭಯ, ಪರೀಕ್ಷೆ, ಟ್ಯೂಷನ್ ........ಹೀಗೆ ಎಲ್ಲದರಿಂದಲೂ ಸ್ವಲ್ಪ ಕಾಲ ಮುಕ್ತಿ. ರಜೆ ಬಿಡುವುದರಿಂದ ದಣಿದ ಮನಸ್ಸಿಗೆ ಏಕತಾನತೆಯಿಂದ ಹೊರಬರುತ್ತಾ ಮುದ ನೀಡಿದಂತಾಗುತ್ತದೆ. ನಾನಾ ರೀತಿಯಿಂದ ಮಕ್ಕಳಿಗೆ ಬೆಸಿಗೆ ರಜೆ ಅಚ್ಚುಮೆಚ್ಚು.

ರಜಾ ಕಾಲದಲ್ಲಿ ಸುತ್ತಾಟ, ಪ್ರವಾಸ, ಅಲೆದಾಟ, ನೆಂಟರ ಊರು, ಅಜ್ಜ–ಅಜ್ಜಿಯರ ಮನೆ, ಹಳ್ಳಿಯ ತಿರುಗಾಟ, ಪ್ರಕೃತಿಯ ಮಡಿಲಲ್ಲಿನ ಆಟಗಳಿಂದ ಸಿಗುತ್ತಿದ್ದ ಹಿಗ್ಗಿಗೆ ಬೆಲೆ ಕಟ್ಟಲಾದೀತೆ ?. ಆದರೆ ಇಂದಿನ ಮಕ್ಕಳ ಬೇಸಿಗೆ ರಜೆಯನ್ನು ನೆನೆಸಿಕೊಂಡರೆ ಕರಳು ಚುರ್ ಎನ್ನದಿರಲಾರದು. ಆದರೆ ನಾವು ಬೇಸಿಗೆ ರಜೆಯನ್ನು ಮಜವಾಗಿ ಕಳೆದಿದ್ದೇವೆ. ನಮ್ಮ ಮಕ್ಕಳು ಆ ರಜೆಯನ್ನು ಸಂತಸದಿಂದ ಅನುಭವಿಸುವಂತಾಗಬೇಕು. ಆದರೆ ವಾಸ್ತವದಲ್ಲಿ ಶಾಲೆ ಇಲ್ಲವಲ್ಲ ಎನ್ನುವ ಸಂತಸ ಬಿಟ್ಟರೆ ಮಕ್ಕಳಿಗೆ ಮತ್ತೇನು ಖುಷಿ ಸಿಗದಿರುವುದು ವಿಪರ್ಯಾಸ. ಇಂದಿನ ಮಕ್ಕಳಿಗೆ ಬಹುತೇಕ ರಜಾ–ಮಜಾವಾಗದೇ ಸಜಾ ಆಗುತ್ತಿರುವುದು ದುರಂತವೆ ಸರಿ. ಹೂವಿನಂತ ಮನಸ್ಸಿನ ಮಕ್ಕಳನ್ನು ಮತ್ತೆ ಪಾಶ್ಚಾತ್ಯಾ ಸಂಸ್ಕೃತಿಯ ಬೇಸಿಗೆ ಶಿಬಿರಗಳ ಹೆಸರಿನಲ್ಲಿ ನಾಲ್ಕುಗೋಡೆ ಒಳಗೆ ಕಟ್ಟಿ ಹಾಕಿ, ಶಾಲಾ ಪಠ್ಯದ ಕಲಿಕೆಯನ್ನೇ ಯಾಂತ್ರಿಕವಾಗಿ ರುಬ್ಬುತ್ತಿರುವುದು ವಿಷಾದನೀಯ.

ಅಂದಿನ ಬೇಸಿಗೆ ರಜಾ ಖುಷಿಯೋ. . . .

ಕೆಲ ವರ್ಷಗಳ ಹಿಂದೆ ಬೇಸಿಗೆ ಶಿಬಿರಗಳ ಸದ್ದೇ ಇರಲಿಲ್ಲ. ಹಾಗಾಗಿ ಅಂದು ಸಂಬಂಧಗಳಿಗೆ ಹೆಚ್ಚು ಬೆಲೆ ಇತ್ತು. ಅಜ್ಜ, ಅಜ್ಜಿ, ದೊಡ್ಡಪ್ಪ, ದೊಡ್ಡಮ್ಮ, ಮಾವ, ಅತ್ತೆ, ಅಕ್ಕ, ಅಣ್ಣ, ತಮ್ಮ ಇಂತಹ ಸಂಬಂಧಗಳು ಹೆಚ್ಚು ಪ್ರಿಯವಾಗಿದ್ದವು. ಅವಿಭಕ್ತ ಕುಟುಂಬಗಳೇ ಹೆಚ್ಚಿದ್ದವು.ಹಳ್ಳಿಗಳುನಗರಗಳಿಗಿಂತಸುಂದರ–ಸುಮಧುರವಾಗಿದ್ದವು. ಇವುಗಳ ಪ್ರಭಾವದಿಂದ ರಜಾ ಅವಧಿಯಲ್ಲಿ ಅಂದು ಎಲ್ಲ ಮಕ್ಕಳ ಪಯಣ ಹಳ್ಳಿಯತ್ತ ಸಾಗುತ್ತಿತ್ತು.

ಹಳ್ಳಿಗೆ ಮಕ್ಕಳು ಬಂದಾಗ ಹಬ್ಬದ ವಾತಾವರಣ ಇರುತ್ತಿತ್ತು. ವಸಂತನ ಆಗಮನದಿಂದ ಎಲ್ಲೆಡೆ ಚಿಗುರು ಆಕರ್ಷಿಸುತ್ತಿರುತ್ತದೆ. ಅದರ ನಡುವೆ ಮಕ್ಕಳು ಗದ್ದೆ, ತೋಟ, ಹೊಲಗಳಲ್ಲಿ ಸುತ್ತಾಡುವಾಗ ಬಿಸಿಲಿನ ಝಳದ ಪರಿವೇ ಇರುತ್ತಿರಲಿಲ್ಲ. ಅಲ್ಲಿ ಪರಿಸರದ ನಡುವೆಯೇ ಅರಿವಿಲ್ಲದ ಕಲಿಕೆಯಾಗುತ್ತಿತ್ತು. ವಿವಿಧ ಗಿಡ, ಮರ, ಹೂ, ಹಣ್ಣುಗಳ ಹೆಸರು ಪರಿಚಯ ಜೊತೆಗೆ ಅನುಭವವೂ ಸಿಗುತ್ತಿತ್ತು. ಯಾವುದೇ ನಿರ್ಬಂಧಗಳಿಲ್ಲದೇ ಪ್ರಕೃತಿ ಸೊಬಗಲ್ಲಿ ಸವಿದಿದ್ದೇ ಸವಿದಿದ್ದು. ಮರಗಳನ್ನು ಹತ್ತುವುದು, ಹಣ್ಣು–ಬೀಜಗಳನ್ನು ಸಂಗ್ರಹಿಸುವುದು, ಬೆಟ್ಟ–ಗುಡ್ಡಗಳನ್ನು ಏರುವುದು, ಹಳ್ಳ, ನದಿ, ಕೆರೆಗಳಲ್ಲಿ ಈಜಾಡಿದ್ದನ್ನು ನೆನೆದರೆ ಇಂದಿಗೂ ಮೈ–ಮನ ಗಳು ರೋಮಾಂಚನಗೊಂಡು ಪುಳಕಗೊಳ್ಳುತ್ತವೆ. ಅಂದಿನ ಸಿನೆಮಾ–ನಟಕಗಳೇ ಬಹುದೊಡ್ಡ ಮಾಧ್ಯಮಗಳು. ರಾತ್ರಿ ಪೂರ್ತಿ ನಾಟಕಗಳು ನಡೆಯುತ್ತಾ ನಡುವೆಯೇ ನಿದ್ದೆ ಹೋದ ಪ್ರಸಂಗಗಳು ಒಂದೆರಡಲ್ಲ.

ಆಟಗಳ ವಿಷಯಕ್ಕೆ ಬಂದರಂತೂ. . . . ಕ್ರಿಕೇಟ್ ಪರಿಚಯ ಅಷ್ಟಕಷ್ಟೆ. ಚಿಣ್ಣದಾಂಡು, ಗೋಲಿ, ಕಣ್ಣಾಮುಚ್ಚಾಲೆ, ಚೌಕಾಬಾರ, ವಟ್ಟಪ್ಪ, ಕೋಲ್ ಚಿಮ್ಮ ಆಟ, ಕುಂಟಾಬಿಲ್ಲೆ, ಮರಕೋತಿ ಅಟ, ಹಗ್ಗದಾಟ, ಕಣ್ ಕಟ್ಟ ಅಟ, ಜೋಡಿ ಮುಟ್ಟಾಟ, ಉಪ್ಪಾಟ, ಮೀನು ಬಲೆ, ಲಗೋರಿ, ಮೂರುಕಾಲು ಓಟ, ಚಾವಿ, ಕವಡೆ, ಆನೆಪೊಳ್ಳು,ಬಳೆಚೂರುಆಟ, ಬಗುರಿ, ಹಾವು ಏಣಿ, ಗಾಲಿ ಆಟ, ರೈಲಾಟ, ಗಾಳಿಪಟದಾಟ, ಜೋಕಾಲಿ, ಕಪ್ಪೆ ಓಟ, ಕಬಡ್ಡಿ ಹೀಗೆ ಒಂದೇ ಎರಡೇ . . ಆಡಿದ್ದೇ ಆಡಿದ್ದು. ಆಟಕ್ಕೆ ಸಮಯ ಮಾತ್ರ ಸಾಲದಾಗಿತ್ತು.


ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಹಳ್ಳಿಯಲ್ಲಿ ದನ–ಕರುಗಳ ಜೊತೆ ಒಡನಾಟ, ಜಾತ್ರೆ, ಸಂತೆ, ಗಾಡಿಯಲ್ಲಿನ ಪಯಣ ಇವೆಲ್ಲವಕ್ಕಿಂತ ಮುಖ್ಯವಾಗಿ ದಿನವಿಡಿ ಹಾರಾಡಿ, ಕೂಗಾಡಿ, ಆಟವಾಡಿ ದಣಿದ ದೇಹಕ್ಕೆ ಅಜ್ಜ–ಅಜ್ಜಿಯರ ಕಥೆಗಳು ಅರಿವಿಲ್ಲದೇ ನಿದ್ರಾಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದವು. ಕಥೆಗಳೆಂದರೆ ಬಹುತೇಕವಾಗಿ ರಾಮಾಯಣ–ಮಹಾಭಾರತ. ಹಾಗಾಗಿ ಅವು ಇಂದಿಗೂ ನಮ್ಮ ಮುಂದೆ ನಡೆಯುತ್ತಿವೆ ಎಂಬಂತೆ ನಮಗೆ ಭಾಸವಾಗುತ್ತಿವೆ. ಅಷ್ಟೊಂದು ಸುಂದರವಾಗಿ ಮನಮುಟ್ಟುವಂತೆ ಕಥೆ ಹೇಳುವ ಕೌಶಲ ಅಜ್ಜ–ಅಜ್ಜಿಯರಿಗಿತ್ತು. ಅವೆಲ್ಲವೂ ನಮ್ಮ ಜೀವನದ ಅವಿಸ್ಮರಣೀಯ ದಿನಗಳು ಎಂಬಷ್ಟು ಅಚ್ಚು ಮೆಚ್ಚಾಗಿವೆ.




ಇಂದಿನ ಸಮ್ಮರ್‌ಕ್ಯಾಂಪ್‌ಗಳ ಸಜೆಯೋ. . .

ಮಕ್ಕಳಿಗೆ ಇಚ್ಛವಿರಲಿ ಬಿಡಲಿ ಪಾಲಕರು ತಮ್ಮ ಪ್ರತಿಷ್ಠೆಗಾದರೂ ಮಕ್ಕಳನ್ನು ಬೇಸಿಗೆ ಶಿಬಿರಗಳಿಗೆ ಹಾಕುವ ಸಂಸ್ಕೃತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆ ಮಕ್ಕಳ ಬಾಲ್ಯದ ಕನಸುಗಳನ್ನು ಕಡೆಗಣಿಸುವ ದೊಡ್ಡವರು ತಮ್ಮ ಅಪೂರ್ಣ ಆಸೆ–ಮಹತ್ವಕಾಂಕ್ಷೆಗಳನ್ನು ಮಕ್ಕಳ ಮೇಲೇರುತ್ತಿರುವುದು ನಿಜಕ್ಕೂ ಅಮಾನವೀಯ. ಇಂತಹ ಅಸಹಜ ಚಟುವಟಿಕೆಗಳಿಂದ ಮಕ್ಕಳ ಮನಸ್ಸಿನ ಮೇಲೆ ಆಘಾತವಾಗುವುದನ್ನು ಅಲ್ಲಗಳೆಯುವಂತಿಲ್ಲ. ಪಾಲಕರು ತಮ್ಮ ಅಭಿರುಚಿ, ಯೋಚನಾ ಲಹರಿಯ ಅಭಿವ್ಯಕ್ತಿಗೆ ಬೇಕಾದಂತೆ ಕಲಬೆರಕೆ ಮಾಡುವುದು ಸರಿಯಲ್ಲ. ಮಕ್ಕಳನ್ನು ಕೃತಕ ಅನುಕರಣೆಯತ್ತ ತಳ್ಳದೆ ನೈಜತೆಯ ಸ್ವಚ್ಛಂದ ಬಾನಿನಲ್ಲಿ ಹಾರಡಲು ಬಿಡುವುದು ಹಿರಿಯರ ಜವಾಬ್ಧಾರಿಯಾಗಿದೆ.

ಇನ್ನೊಂದುಕಡೆಗೆ ಇಂದಿನ ಮಕ್ಕಳೆಲ್ಲರೂ ಹಲವು ಬಗೆಯ ಅವಕಾಶಗಳಿಂದ ವಂಚಿತರಾಗಿದ್ದಾರೆ. ವಿಭಕ್ತ ಕುಟುಂಬದ ಅಡಿಯಲ್ಲಿ ತಂದೆ–ತಾಯಿಗಳಿಬ್ಬರೂ ದುಡಿಯುತ್ತಿರುವಾಗ, ಮಕ್ಕಳಿಗೆ ರಜೆಯನ್ನು ಅನುಭವಿಸುವ ಸುಂದರ ಘಳಿಗೆಗಳು ಸಜೆಗಳಾಗುತ್ತಿವೆ. ರಜೆಯಿಂದಾಗಿ ಒತ್ತಡಕ್ಕೆ ಕೆಲಕಾಲ ಮುಕ್ತಿ ದೊರಕಿತು ಎನ್ನುವಾಗಲೇ ಬೇಸಿಗೆ ಶಿಬಿರಗಳಿಗೆ ಮಕ್ಕಳನ್ನು ನೂಕಲಾಗುತ್ತದೆ. ಸೃಜನಾತ್ಮಕ ಚಟುವಟಿಕೆ ಹೆಸರಿನಲ್ಲಿ ಹಣ ವಸೂಲಿ ಮಾಡುವ ಮತ್ತು ಪಾಶ್ಚಾತ್ತೀಕರಣದ ಸಮ್ಮರ್‌ಕ್ಯಾಂಪ್‌ಗಳ ಹಾವಳಿ ಇಂದು ಹೆಚ್ಚಾಗುತ್ತಾ. . . ಹಕ್ಕಿಗಳಂತೆ ಬಾನಿನೆಲ್ಲೆಡೆ ಹಾರಬೇಕೆಂಬ ಮಕ್ಕಳ ಉತ್ಸಾಹಕ್ಕೆ ತಣ್ಣೀರು ಎರಚುತ್ತಿವೆ. ಬಹುತೇಕ ಬೇಸಿಗೆ ಶಿಬಿರಗಳು ಶಾಲಾ ಪಠ್ಯದ ಕಲಿಕೆಯ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತವೆ. ಪಠ್ಯಕ್ಕೆ ಹೊರತಾದ ಮಕ್ಕಳ ಮನೋವಿಕಾಸದ ಜೊತೆಗೆ ಅವರ ನೈಜ ಪ್ರತಿಭೆಯನ್ನು ಗುರುತಿಸಿ, ಸಾಣೆ ಹಿಡಿವ ಶಿಬಿರಗಳು ಸಿಗುವುದೇ ಕಡಿಮೆ.

ಪಾಲಕರು ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ, ಮಕ್ಕಳ ಮನಸ್ಸಿನ ಭಾವನೆಗಳು ವಿಶಿಷ್ಟವಾದುದು. ನಗು, ಚೈತನ್ಯ, ಉತ್ಸಾಹವಿದಿದ್ದರೆ ಏನನ್ನಾದರೂ ಸಾಧಿಸಬಹುದು. ಮಕ್ಕಳು ಸದಾ ಉಲ್ಲಾಸ ಉತ್ಸಾಹದ ಬುಗ್ಗೆಯಾಗಿರುತ್ತಾರೆ. ಪ್ರತಿಯೊಂದು ಮಗುವಿನಲ್ಲೂ ಒಂದೊಂದು ವಿಶಿಷ್ಟ ಗುಣಗಳಿರುತ್ತವೆ. ಪಾಲಕರು ಆ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಉತ್ತಮ ಸಾಧನೆ ಮಾಡುವ ಮೂಲಕ, ಸಮಾಜದಲ್ಲಿ ಉನ್ನತ ವ್ಯಕ್ತಿಗಳಾಗಿ ರೂಪಗೊಳ್ಳುತ್ತಾರೆ. ಕೇವಲ ಪಠ್ಯದ ಕಲಿಕೆ ಆಧಾರದಮೇಲೆ ತಮ್ಮ ಮಕ್ಕಳ ಯೋಗ್ಯತೆ, ಅರ್ಹತೆ, ಪ್ರತಿಭೆಯನ್ನು ಅಳತೆ ಮಾಡಬಾರದು. ಇದರ ಫಲವಾಗಿ ಪ್ರತಿಭೆಗಳು ಕಮರಿಹೋಗುತ್ತವೆ.

**ಎಚ್ಚರವಿರಲಿ:–**

ರಜೆಯಲ್ಲಿ ಮಕ್ಕಳನ್ನು ಬೇಸಿಗೆ ಶಿಬಿರಕ್ಕೆ ಸೇರಿಸಲೇ ಬೇಕು ಎನ್ನುವುದಾದರೆ ಕೆಲವು ಮಾನದಂಡಗಳನ್ನು ಅನುಸರಿಸುವುದು ಸೂಕ್ತ. ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ದೇಶಾಭಿಮಾನ, ಸಂಸ್ಕೃತಿ, ವಿವಿಧ ಕಲೆಗಳು, ಅಭಿನಯ, ವಿವಿಧ ಸಾಹಸ ಕ್ರೀಡೆಗಳು, ಕಂಪ್ಯೂಟರ್, ಜನಪದ ಹಾಡು–ಆಟ, ಕಥೆಗಳು, ಇತರೆ ಶ್ರೇಷ್ಠ ಪುಸ್ತಕಗಳ ಪರಿಚಯ ಮತ್ತು ಓದಲು ಪ್ರೋತ್ಸಾಹ, ಮಕ್ಕಳಲ್ಲಿ ಕಥೆ–ಕವನ–ಲೇಖನ ಪ್ರತಿಭೆ, ಮೋಜಿನ ಆಟ, ಪವಾಡ ಬಯಲು, ಭಾಷಣ ಶೈಲಿ. . ..ಇತ್ಯಾದಿಗಳನ್ನು ಮಕ್ಕಳಿಗೆ ಅರ್ಥಪೂರ್ಣವಾಗಿ ಪರಿಚಯಿಸಬೇಕು. ಪರಿಚಯದಿಂದ ಮಕ್ಕಳಿಗೆ ಆಸಕ್ತಿ ಬೆಳೆದು ಅವುಗಳಲ್ಲಿ ತಲ್ಲಿನರಾಗುವಂತೆ ತೊಡಗಿಸುವುದು ಬೆಸಿಗೆ ಶಿಬಿರಗಳ ಕೆಲಸವಾಗಬೇಕು. ಅಂತಹ ಶಿಬಿರಗಳಿಂದ ಮಾತ್ರ ಫಲ ಕಾಣಬಹುದು.

ಪಾಲಕರು ಮಕ್ಕಳ ಕಾಟ ತಾಳಲಾರದೇ, ಕಿರಿಕಿರಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಶಿಬಿರಗಳಿಗೆ ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಗಲ್ಲಿ ಗಲ್ಲಿಗಳಲ್ಲಿ ಹಣದೋಚಲು ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಶಿಬಿರಗಳ ಬಗ್ಗೆ ಪೋಷಕರು ಜಾಗೃತರಾಗಿರಬೇಕು. ರಜಾ ಅವಧಿಯನ್ನು ಕಳೆಯಬೇಕು ಎಂಬುದನ್ನು ಮಾತ್ರ ಯೋಚಿಸದೇ ಈ ಸಮಯವನ್ನು ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬಳಸುವುದು ಹೇಗೆ ಎಂಬುದರ ಬಗ್ಗೆ ಚಿಂತಿಸಬೇಕು. ಮಕ್ಕಳಲ್ಲಿನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆ ಯಾಗುವುದರ ಜೊತೆಗೆ ಅವರ ಆಸಕ್ತಿ ಕ್ಷೇತ್ರವನ್ನು ಗುರುತಿಸಿ–ಕೆರಳಿಸುವಂತ ಶಿಬಿರಗಳಿಗೆ ಮಕ್ಕಳನ್ನು ಸೇರಿಸಬೇಕು. ಇನ್ನೂ ಸಮಯ ಮಿಂಚಿಲ್ಲ ಅಂತಹ ಕ್ಯಾಂಪ್‌ಗಳನ್ನು ಹುಡುಕಿ ಮಕ್ಕಳನ್ನು ಸೇರಿಸಿ. ಸುಂದರವಾದ ಮೊಗ್ಗುಗಳು ಅರಳುವುದರ ಜೊತೆಗೆ ತಮ್ಮ ಕಂಪನ್ನೂ ಬೀರುವಂತಾಗಲಿ.




ಹಂಪಿ ಶ್ರೀ ವಿರುಪಾಕ್ಷೇಶ್ವರನ ಶಿವರಾತ್ರಿ ಜಾಗರಣೆ ಮಾಡಲು ಸೇರಿದ ಭಕ್ತ ಸಮೊಹ



ಹೊಸಪೇಟೆ ವೀರಶೈವ ರೂದ್ರಭೂಮಿಯಲ್ಲಿ ಶಿವರಾತ್ರಿ ನಿಮಿತ್ತ ಅರಿವು ಆಚಾರ ಅನುಷ್ಠಾನ ಟ್ರಸ್ಟ್ ವತಿಯಿಂದ ಸಮಾದಿಗೆ ದೀಪ ಬೆಳಗಿ,ಇಷ್ಟಲಿಂಗ ಪೂಜೆ ನೆರವೇರಿಸಲಾಯಿತು.

## ಶ್ರೀಕಲ್ಲೇಶ್ವರ ಸ್ವಾಮಿ ರಥೋತ್ಸವ ಸಿದ್ಧತೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ಐತಿಹಾಸಿಕ ಶ್ರೀಕಲ್ಲೇಶ್ವರ ಸ್ವಾಮಿ ರಥೋತ್ಸವ ಇದೇ ಮಾ.12ರ ಮಂಗಳವಾರ ಸಂಜೆ 5ಗಂಟೆಗೆ ರಥೋತ್ಸವ ಜರುಗಲಿದೆ ಎಂದು ಶ್ರೀಸ್ವಾಮಿ ಸೇವಾ ಸಮಿತಿಯವರು ತಿಳಿಸಿದರು.

ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ನಡೆಯುವ ಜಾತ್ರಾ ಮಹೋತ್ಸವವು, 66ನೇ ವರ್ಷದಾಗಿದ್ದು, ನೂತನ ರಥ ನಿರ್ಮಾಣವಾಘಿ 21ನೇ ವರ್ಷದ ಮಹೋತ್ಸವ ಆಗಿದೆ. ಈಗಾಗಲೇ ತೇರಿನ ಗಾಲಿಯನ್ನು ಹೊರ ಹಾಕಿದ್ದು, ರಥೋತ್ಸವಕ್ಕೆ ತಯಾರಿ ನಡೆದಿದೆ. ಶುಕ್ರವಾರ ಬೆಳಗ್ಗೆ ಶ್ರೀಸ್ವಾಮಿಗೆ ವಿಶೇಷಪೂಜೆ ನಡೆಯಿತು. ಭಾನುವಾರ ಕಳಸರೋಹಣ, ಸೋಮವಾರ ರಾತ್ರಿ ಸ್ವಾಮಿಯ ಮೂರ್ತಿ ಉತ್ಸವ ಹೀಗೆ ನಾನಾ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸ್ವಾಮಿಯ ರಥೋತ್ಸವ ಮಂಗಳವಾರ ಸಂಜೆ ಜರುಗಲಿದೆ ಎಂದು ತಿಳಿಸಿದರು.

ಈ ವೇಳೆ ಸಮಿತಿಯ ಮುಖಂಡರಾದ ಹಾಲ್ದಾಳ್ ವಿಜಯಕುಮಾರ್, ಎಚ್.ಎಂ. ಕೊಟ್ರಯ್ಯ, ಡಿಶ್ ಬಾಳಪ್ಪ, ಖಾನಾವಳಿ ಬಸವರಾಜಪ್ಪ, ಮಹೇಶಪ್ಪ, ರಡ್ಡಿ ಮಹೇಶಪ್ಪ, ಪೂಜಾರ್ ಶ್ಯಾಮಪ್ಪ, ನಕ್ಷತ್ರಪ್ಪ, ಶರಣಪ್ಪ, ಕಮ್ಮಾರ್ ಮಲ್ಲಪ್ಪ, ಮಲ್ಲಪ್ಪ ಮತ್ತಿತರರು ಇದ್ದರು.

**ಕವಿ ಮನಸು**

## ನಾರಿಯ ದಾರಿ?

ನವಮಾಸದಿ ಹೊತ್ತು
ನೋವುಗಳ ನುಂಗಿ
ಕಂದನ ಹೆತ್ತು .
ಕುಟುಂಬದ ಭಾರವ
ಹೊತ್ತು,
ಬದುಕಿನ ಬಂಡಿಯ
ನೊಗವನೊತ್ತು,
ಕಷ್ಟಸುಖಗಳ ಸಾವದಾನದಿ
ಮೌನದಿ ತೆತ್ತು,
ಅಡುಗೆಯ ಮನೆಯ
ಜವಾಬ್ದಾರಿ ಮುಗಿಸಿ
ಶಿಕ್ಷಣವೆಂಬ ಮಂತ್ರದಿ
ಸುಜ್ಞಾನವ ಪಡೆದು
ಸರ್ವ ರಂಗಗಳಲ್ಲೂ
ಕಾರ್ಯದಿ
ಕೀರ್ತಿ ಪತಾಕೆಯ
ಹಾರಿಸಿ,
ಹೆಣ್ಣು ಅಬಲೆಯಲ್ಲ
ಸಬಲೆಯೆಂದು
ಜಗಜ್ಜಹೀರಾಗಿಸಿ,
ಆಧುನಿಕ ತಂತ್ರಜ್ಞಾನದ
ಸೋಂಕಿಗೆ ಬಸವಳಿದು
ಬಲಿಯಾಗಿ,
ಹೆಪ್ಪಿಟ್ಟ ಜ್ವಾಲಾಮುಖಿಯಾಗಿ
ಸಿಡಿದೆದ್ದು ದೃಷ್ಟರ
ದಹಿಸಿ,
ದುರಾಸೆಯ ಮೋಹಕೆ
ಮನಬಾಗಿ
ವಂಚಕರ ಕಪಿಮುಷ್ಟಿಗೆ
ಸಿಲುಕಿ ನರಳಾಡಿ
ಜೀವಗಳು
ನಂದುತಿವೆ,
ವಾಸ್ತವ ಬದುಕನು ಅರಿತು
ಸಂಸ್ಕಾರದ ಮುಡಿಯಲಿ
ಸಾಧನೆಯ ಹಾದಿಯಲಿ
ನೀ ಚಲಿಸು,
ನೆಲದ ಸಂಸ್ಕೃತಿಯ
ಉಳಿಸಿ ಬೆಳೆಸು
ಆಗ ಹೆಣ್ಣಿಗೂ,ಮಣ್ಣಿಗೂ
ಬಾಳಿಗೂ,
ಸೊಗಸು?.!!

**– ಕಾಡಜ್ಜಿ ಮಂಜುನಾಥ**

## ಅವಳೆಂಬ ಬೆಳಕು



ಅವಳೆಂಬ ಬೆಳಕು
ಸಂಸಾರಕೆ ತಳುಕು।

ಅವಳು ಇರುವುದು ಹಾಗೆ
ಅವಳು ಮನೆಗೆ ದೀವಿಗೆ।

ಅವಳಿದ್ದರೆ ಮನೆಗೆ ತೋರಣ
ಅವಳಿಲ್ಲದ ಮನೆ ಮಸಣ।

ಅವಳ ಮನ ನೊಯಿಸದಿರಿ
ಅವಳು ಮನೆಗೆ ದೇವತೆ ಅರಿಯಿರಿ।

**– ಚಂದ್ರಶೇಖರಯ್ಯ ರೋಣದಮಠ**

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.




**ಎಷ್ಟೇ ಉನ್ನತ ಶಿಕ್ಷಣ ಪಡೆದರೂ ಸರಕಾರಿ ಕೆಲಸ ಸಿಗದಿರುವುದು, ಓದಿದ ಕಾರಣಕ್ಕೆ ಸಿಕ್ಕ ಸಣ್ಣ ಪುಟ್ಟ ಕೆಲಸ ಮಾಡಲು ಮನಸ್ಸು ಮಾಡದಿರುವ ಸಮಯದಲ್ಲಿ ಕೇವಲ ಅಕ್ಷರ ಜ್ಞಾನ ಪಡೆದುಕೊಂಡು ತಮ್ಮ ಬದುಕನ್ನು ಇನ್ನೊಬ್ಬರ ಸಹಾಯವಿಲ್ಲದೇ ತಾವೇ ನಿಭಾಯಿಸಲು ಸಹಕಾರಿಯಾಗುವಂತಹ ಈ ಕಾಯಕ ಸಮುದಾಯದ ಮಹಿಳೆಯರನ್ನು ಸ್ವಾವಲಂಬಿಗಳಾಗಿ ಬದುಕಲು ಸಹಕರಿಸಿದೆ. ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವುದರ ಜೊತೆಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.**

# ಬಿದಿರು ಕಾಯಕದಲ್ಲಿ ಮಹಿಳಾ ಸ್ವಾವಲಂಬನೆ



ದುಡಿಯದವರಿಗೆ ಉಣ್ಣುವ ಹಕ್ಕಿಲ್ಲ" ಎನ್ನುವ ಮಾತನ್ನು ಅಕ್ಷರಶಃ ಪಾಲಿಸುವ, ಕಾಯಕದ ಮಹತ್ವ ಅರಿತಿರುವ ಮತ್ತು ಅದನ್ನೇ ಬದುಕುತ್ತಿರುವ ಸಮುದಾಯಗಳಲ್ಲಿ ಮೇದಾರ ಸಮುದಾಯವೂ ಒಂದು. ದುಡಿದೇ ಉಣ್ಣುವ ಕಾಯಕ ಕಲ್ಪನೆಯನ್ನು ಕೊಟ್ಟ ಶರಣರನ್ನು ಬದುಕುತ್ತಿರುವ ಈ ಸಮುದಾಯದಲ್ಲಿ 'ಬಿದಿರು' ಮಹತ್ವದ ಪಾತ್ರ ವಹಿಸಿದೆ. ತಮ್ಮ ಕಾಯಕಕ್ಕೆ ಬೇಕಾದ ಬಿದಿರು ಮೆಳೆಯನ್ನು ಪೂಜಿಸಿಕೊಂಡು ಅದನ್ನೇ ಹಾಸಿ ಹೊದ್ದು ಮಲಗುವಷ್ಟು ಅದು ಬದುಕನ್ನು ಆವರಿಸಿದೆ. ಪ್ರತಿ ವರ್ಷ ಭರತ ಹುಣ್ಣಿಮೆ ಒಳಗೆ ಕರ್ನಾಟಕದ ಬೇರೆ ಬೇರೆ ಕಡೆ ವಾಸಿಸುವ ಸಮುದಾಯದ ಜನರು ಮಲೆಯಮ್ಮ ಚೌಡಮ್ಮ (ಮಲೆಯಮ್ಮ ಅಂದರೆ ಬಿದಿರನ ಮೆಳೆ. ಚೌಡಮ್ಮ ಎಂದರೆ ಬಿದಿರಿನ ಒಂದು ಜಾತಿ 'ಚೌಲ' ಚೌಲಮ್ಮ> ಚೌಡಮ್ಮ)ಹಬ್ಬವನ್ನು ತಮಗೆ ಅನುಕೂಲವಾದ ಮಂಗಳವಾರದಂದು ಆಚರಿಸುತ್ತಾರೆ. ಮೂರು ತಿಂಗಳವರೆಗೂ ಇದನ್ನು ಅಲ್ಲಲ್ಲಿ ಕಾಣುತ್ತೇವೆ. ಮಲೆಯಮ್ಮ ಮತ್ತು ಚೌಡಮ್ಮ ಎಂದೇ ಆಡು ಭಾಷೆಯಲ್ಲಿ ಕರೆಯಲ್ಪಡುವ ಮೆಳೆಯಮ್ಮ ಚೌಲಮ್ಮ ಮೇದಾರ ಸಮುದಾಯದ ಕುಲದೇವತೆ. ಪ್ರತಿವರ್ಷ ತಾವು ವಾಸಿಸುವ ಪ್ರದೇಶದ ಜನರೆಲ್ಲಾ ಸೇರಿ ಸೌಹಾರ್ದದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ದೇವಿಯ ವಾರವಾದ ಮಂಗಳವಾರ ಯಾರೂ ಕೆಲಸ ಮಾಡದೇ ತಾವು ನಂಬಿಕೊಂಡಿರುವ, ತಮ್ಮ ಬದುಕನ್ನು ಪೊರೆವ ದೇವತೆಗೆ ಕೃತಜ್ಞತೆ ಸಲ್ಲಿಸುತ್ತಾರೆ.

"ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ" ಎನ್ನುವ ಶರಣರ ಸರಳತೆಯನ್ನು ಮೈಗೂಡಿಸಿಕೊಂಡು ಬದುಕತ್ತಾರೆ. ವಯಸ್ಸಿನಲ್ಲಿ ಹಿರಿಯರನ್ನು ಮಾತನಾಡಿಸಿದರೆ ಅಕ್ಕ ಅಣ್ಣ ಎನ್ನುತ್ತಲೇ ಮಾತು ಪ್ರಾರಂಬಿಸುವ ಇವರ ದಿನ ಪ್ರಾರಂಭವಾಗುವುದು ಹಣೆಯಲ್ಲಿ ವಿಭೂತಿಯೊಂದಿಗೆ. ಪುರುಷರು ಮನೆಯಲ್ಲಿ ಮತ್ತು ಮನೆಯಿಂದ ಹೊರಗು ಕೆಲಸ ಮಾಡುವುದು ಸಾಮಾನ್ಯ. ಬಿದಿರನ್ನೇ ನಂಬಿಕೊಂಡು ಒಳ ಹೊರಗು ತಮ್ಮನ್ನು ತೊಡಗಿಸಿಕೊಂಡಿರುವುದ ಹೌದು. ಕೇವಲ ಅಕ್ಷರ ಜ್ಞಾನನಕ್ಕಾಗಿ ಶಿಕ್ಷಣ ಪಡೆದು ಸ್ವಃ ಉದ್ಯೋಗ ಕೈಕೊಂಡು ಸುಂದರ ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡಿದ್ದಾರೆ.

ಮುಖ್ಯವಾಗಿ ನಾವು ಗಮಿಸಬೇಕಾದುದು ಮಹಿಳೆಯರು ಈ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗೆ ಮತ್ತು ಸ್ವಾವಲಂಬನೆ. ಮಹಿಳೆಯರು ಸಂಖ್ಯೆಯಲ್ಲಿ ಹೆಚ್ಚು ಶಿಕ್ಷಣ ಪಡೆದವರಲ್ಲ, ಆದರೆ ಇತ್ತೀಚೆಗೆ ಹೆಣ್ಣು ಮಕ್ಕಳು ಹೆಚ್ಚಿನ ಶಿಕ್ಷಣ ಪಡೆದು ಮನೆಯಿಂದ ಹೊರಗಡೆ ತಮ್ಮ ವೃತ್ತಿ ಬದುಕನ್ನು ಕಂಡುಕೊಳ್ಳುತ್ತಿದ್ದಾರೆ, ಆದರೆ ಅತೀ ವಿರಳ. ಮನೆಯಲ್ಲಿಯೇ ಬಿದಿರನ್ನು ಸೀಳಿ ಸಾಮಾನ್ಯವಾಗಿ ದಿನ ಬಳಕೆಯ ವಸ್ತುಗಳಾದ ಮೊರ, ಬುಟ್ಟಿ, ಬೀಸಣಿಕೆ, ಚಾಪೆಗಳನ್ನು ತಯಾರಿಸುವುದು ಸಂಪ್ರದಾಯ. ಒಂದು ಇಡೀ ಬಿದಿರನ್ನು ಸೀಳುವಾಗಲೇ ಅವರ ಕೌಶಲ್ಯ ಕಣ್ಣಿಗೆ ಕಟ್ಟುತ್ತದೆ. ತಾವು ಗಂಡಸರ ಸಹಾಯವಿಲ್ಲದೇ ಕತ್ತಿಯಿಂದ ಸೀಳಿ ಅತೀ ಸೂಕ್ಷ್ಮ ಹೋಳುಗಳಾಗಿಸಿಕೊಂಡು ಪರಿಕರಗಳನ್ನು ತಯಾರಿಸಿ ಮಾರಾಟ ಮಾಡಿ ಬಂದ ಹಣದಲ್ಲಿ ಬದುಕುತ್ತಾರೆ. ಹಾಗೆ ಸೀಳುವಾಗ ಬಿದಿರಿನ ಸೂಕ್ಷ್ಮ ಸೀಳು ಚುಚ್ಚಿ ಗಾಯವಾಗುವುದು ಸರ್ವೇ ಸಾಮಾನ್ಯ. ದಿನಕ್ಕೆ ಅದೆಷ್ಟು ಬಾರಿ ಹಾಗೆ ಕೈ ಕಾಳುಗಳಿಗೆ ಚುಚ್ಚಿಕೊಳ್ಳುತ್ತವೆ ಹಾಗೆ ಚುಚ್ಚಿದ ತಕ್ಷಣ ಹಲ್ಲಿನಿಂದ ಕಿತ್ತು ತೆಗೆಯುವುದು ಅವರಿಗೆ ಸಾಮಾನ್ಯ ಸಂಗತಿ. ಅಷ್ಟು ದೊಡ್ಡ ಬಿದಿರನ್ನು ಬೆಂಕಿ ಕಡ್ಡಿ ಗಾತ್ರ ಅಥವಾ ಅದಕ್ಕು ತೆಳುವಾಗಿ ಸೀಳುವುದೆಂದರೆ ಅದೊಂದು ಧ್ಯಾನವೇ ಸರಿ. ಅದು ಅಳತೆ ಪಟ್ಟಿಯಂತೆ ಎಷ್ಟು ಗಾತ್ರದಲ್ಲಿ ಬೇಕು ಅಷ್ಟೇ ಗಾತ್ರದ ಹೋಳುಗಳನ್ನು ಸೀಳಿಕೋಳ್ಳುವಾಗ ಯಾವ ಗಣಿತಜ್ಞರಿಗೂ ಕಡಿಮೆ ಇಲ್ಲ ಇವರ ಲೆಕ್ಕಚಾರ. ಈ ಲೆಕ್ಕ ಕೇವಲ ಅಳತೆ ಕೊಟ್ಟ ಮೊರ, ಬುಟ್ಟಿ ಚಾಪೆಗಳಿಗೆ ಸೀಮಿತವಲ್ಲ. ಕೊಂಡು ತಂದ ಬಿದಿರಿನ ಬೆಲೆ, ತಾವು ತಯಾರಿಸಿ ಮಾರಿದ ವಸ್ತುವಿನ ಬೆಲೆ, ತಮ್ಮ ಕೆಲಸದ ಕೂಲಿ ಇವೆಲ್ಲವುಗಳ ಲೆಕ್ಕವೂ ತೂಗಬೇಕಿದೆ. ಆ ತೂಗಿಸುವಿಕೆಯೇ ಅವರ ಬದುಕು.

ಹೀಗೆ ತಯಾರಿಸಿದ ವಸ್ತುಗಳು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತವೆ. ಅಂದು ತಯಾರಿಸಿದ ವಸ್ತುವಿಗೆ ಅಂದೇ ಬೇಡಿಕೆ ಬರಬಹುದು/ಬರದಿರಬಹುದು. ಬೇಡಿಕೆಗಾಗಿ ಕಾಯುವ ತಾಳ್ಮೆಯು ಅವರಲ್ಲಿದೆ. ಆದರೆ ಹಾಗೆ ಕಾಯುತ್ತಾ ಸುಮ್ಮನೇ ಕುಳಿತುಕೊಳ್ಳುವುದಿಲ್ಲ. ಒಮ್ಮೊಮ್ಮೆ ಹೊರ ರಾಜ್ಯದಿಂದಲೂ ಬೇಡಿಗೆ ಬರಬಹುದು. ಸ್ಥಳಿಯವಾಗಿಯೇ ಹೆಚ್ಚು ಮಾರಾಟವಾಗುವ, ಅದಕ್ಕಾಗಿ ಕಾಯುವ ಕಾಯಕ ಮಾತ್ರ ತಪ್ಪಿದ್ದಲ್ಲ. ಇದು ಸಂಪೂರ್ಣವಾಗಿ ಕರಕುಶಲತೆಯನ್ನೆ ಅವಲಂಬಿಸಿರುವುದರಿಂದ ಮಾರುಕಟ್ಟೆಯಲ್ಲಿ ಸ್ಪರ್ದೆಗಿಳಿಯುವುದು ಕಷ್ಟ. ಇಳಿದರೂ ಆಧುನಿಕ ತಂತ್ರಜ್ಞಾನಕ್ಕೆ ಮಾರು ಹೋದ ಜನ ಇಂಥಹ ವಸ್ತುಗಳ ಕಡೆ ಮುಖ ತಿರುಗಿಸುತ್ತಾರೆ. ಇತ್ತೀಚೆಗೆ ಇದನ್ನು ಮನಗಂಡ ತರುಣಿಯರು ತಂತ್ರಜ್ಞಾನಕ್ಕೆ ಸವಾಲೊಡ್ಡುವಂತೆ ಕೈ ಚಳಕ ತೋರುವಲ್ಲಿ ಮುಂದಾಗುತ್ತಿದ್ದಾರೆ. ಹೊಸ ಮಾದರಿಯ ಕೃತಕ ಹೂದಾನಿಗಳನ್ನು ತಯಾರಿಸುವುದು, ಸಮಾರಂಭಗಳಲ್ಲಿ ಸತ್ಕರಿಸುವ ಹಾರ, ಫಲ ಪುಷ್ಪಗಳನ್ನಿಡುವ ಚಿತ್ತಾರದ ಬುಟ್ಟಿ. ಮನೆ ಮುಂದೆ ಆಕರ್ಷಣೆಗೆ ಇಡುವ ಮಾದರಿಗಳನ್ನು ತಾಯಾರಿಸುತ್ತಾರೆ.

ಸಂತಸದ ವಿಷಯವೆಂದರೆ ಇತ್ತೀಚೆಗೆ ತರಬೇತಿಯೊಂದಿಗೆ ಸ್ವ ಉದ್ಯೋಗ ಕಲ್ಪಿಸುವ ಕರ್ನಾಟಕ ಸರಕಾರದ ಕ್ರಿಯಾ ಯೋಜನೆಯಡಿಯಲ್ಲಿ ನೀಡುವ ತರಬೇತಿಯ ಲಾಭ ಪಡೆದ ಮಹಿಳೆಯರು ಜಾಗತೀಕರಣದ ಈ ಸಂದರ್ಭದಲ್ಲಿ ಸ್ಥಳೀಯ ಮಾರುಕಟ್ಟೆಯಿಂದ ಜಾಗತಿಕ ಮಾರುಕಟ್ಟೆಗೆ ಲಗ್ಗೆ ಇಡುವ ಸಾಹಸ ಮಾಡುತ್ತಿದ್ದಾರೆ. ತರಬೇತಿಯ ಲಾಭ ಪಡೆದು ಮಹಿಳೆಯರು– ಮಹಿಳೆಯರು ಧರಿಸುವ ಆಭರಣಗಳಾದ ಕಿವಿಯೋಲೆ, ಬೆರಳಿನ ಉಂಗುರ, ಹ್ಯಾಂಡ್ ಬ್ಯಾಗ್ ಪರ್ಸ್ ದೀಪದ ಕಂಬ ಇತ್ಯಾದಿಯಾಗಿ ತಯಾರಿಸಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಮ್ಮ ಕರಕುಶಲ ವಸ್ತುಗಳಿಗೆ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಈ ಬಾರಿಯ ಹಂಪಿ ಉತ್ಸವದಲ್ಲಿ ಈ ವಸ್ತುಗಳಿಗೆ ಪ್ರದರ್ಶನಕ್ಕೆ ಅವಕಾಶ ಒದಗಿದ್ದು. ಎರಡು ಮಳಿಗೆಗೆ ಸರಕಾರ ಅವಕಾಶವನ್ನು ಕೊಟ್ಟಿದ್ದು.

Scan For Digital Colourful
HAMPI TIMES E-paper

ಇದೆಲ್ಲವೂ ಸಾಧ್ಯವಾಗುವುದು ಮಹಿಳೆಯರು ತಾವು ತಮ್ಮ ಮನೆ ಕೆಲಸ ಮಕ್ಕಳು ಎಲ್ಲವನ್ನೂ ನಿಭಾಯಿಸಿಕೊಂಡು ಹೊಟ್ಟೆ ಹೊರೆಯುವ ಇಂಥಹ ಸೂಕ್ಷ್ಮ ಕಾಯಕವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದರಿಂದ. ಇದು ಸಂಸ್ಕೃತಿಯ ಮುಂದುವರಿಕೆಯಾಗಿದೆ. ಅವರಿಗೆ ಸಂಕಷ್ಟಗಳಿಲ್ಲದಿಲ್ಲ. ಆದರೂ ಅದರ ನಡುವೆ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವ, ಸಂಪ್ರದಾಯವನ್ನು ಬಿಡದೇ ಕಾಯುವ ಹೊಣೆಯನ್ನು ಈ ಮಹಿಳೆಯರು ಹೊತ್ತಿದ್ದಾರೆ. ಸಾಂಪ್ರದಾಯಿಕ ವೃತ್ತಿಯನ್ನು ಆಧುನೀಕರಣಕ್ಕೆ ಮುಖಾಮುಖಿಯಾಗಿಸುವ ಗುರುತರ ಜವಾಬ್ಧಾರಿಯನ್ನು ಹೊತ್ತಿದ್ದಾರೆ. ಜೊತೆಗೆ ಆರ್ಥಿಕ ಸ್ವಾವಲಂಬನೆಯೊಂದಿಗೆ ಸುಂದರವಾದ ಬದುಕಿನ ಕನಸನ್ನು ನನಸಾಗಿಸುವತ್ತ ದಾಪುಗಾಲಿಡುತ್ತಿದ್ದಾರೆ.

ಮನೆಗಳಲ್ಲಿ ಹಿರಿಯರು ಮಾಡುವ ಕೆಲಸಗಳನ್ನು ನೋಡುತ್ತಲೇ ಚಿಕ್ಕ ಮಕ್ಕಳು ತಾವೂ ಕತ್ತಿ ಹಿಡಿದು ಕೆಲಸಕ್ಕೆ ತೊಡುಗುವುದನ್ನು ನೋಡಿದರೆ ಯಾರೂ ಇಂಥಹ ಸಾಂಪ್ರದಾಯಿಕ ವೃತ್ತಿಗಳನ್ನು ಕಲಿಸಿ ಕೊಡುವ ಅಗತ್ಯವಿಲ್ಲ ಎನ್ನಿಸುತ್ತದೆ. ಎರಡು ಮೂರು ವರ್ಷದ ಮಕ್ಕಳು ಎತ್ತಲು ಆಗದ ಮರದ ಬೊಡ್ಡೆ ಹಿಡಿದುಕೊಂಡು ಕೈಯಲ್ಲಿ ಅಗತ್ಯವಿರುವ ಕತ್ತಿ ಹಿಡಿದು ಹಿರಿಯರನ್ನು ಅನುಕರಿಸುವುದನ್ನು ನೋಡುತ್ತಿದ್ದರೆ ಒಮ್ಮೊಮ್ಮೆ ಭಯ ಆಗುತ್ತದೆ. ಕಾರಣ ಮಕ್ಕಳು ಅಪ್ಪಿ ತಪ್ಪಿ ಮೈ ಕೈ ಗೆ ಗಾಯ ಮಾಡಿಕೊಂಡಾರು ಎಂದು. ಆದರೆ ಆ ಹಿರಿಯರು ಅದನ್ನು ಗಮನಿಯೂ ಗಮನಿಸದವರಂತೆ ಇದ್ದು ಬಿಡುವುದನ್ನು ನೋಡಿದರೆ ಅಚ್ಚರಿಯೂ ಆಗುತ್ತದೆ. ಇವತ್ತಿಗೆ ನಮ್ಮ ಮನೆಗಳಲ್ಲಿ ಇಂಥಹ (ಕತ್ತಿಯಂತಹ) ವಸ್ತುಗಳನ್ನು ಮುಟ್ಟುವುದಿರಲಿ ಮಕ್ಕಳ ಕಣ್ಣಿಗೆ ಬೀಳುವಂತೆಯೂ ಇಡುವುದಿಲ್ಲ. ಆಯಾ ಸಾಂಪ್ರದಾಯಿಕ ವೃತ್ತಿಗಳನ್ನು ಕಿರಿಯರು ಅನಾಯಾಸವಾಗಿ ಕಲಿಯುತ್ತಾರೆ ಎನ್ನುವುದಕ್ಕೆ ಇದು ನಿದರ್ಶನ. ಆದರೆ ಅವುಗಳನ್ನು ಮುಂದುವರಿಸುವ ಮನಸ್ಸು ಇಚ್ಚೆ ನಮ್ಮಲ್ಲಿ ಇಲ್ಲದಿರುವುದು, ಮತ್ತದಕ್ಕೆ ಕಾರಣಗಳು ಹಲವು. ಅಂತಹ ಕಾರಣಗಳನ್ನು ಮುಂದಿಟ್ಟುಕೊಂಡು ಹಿರಿಯರು ಕಿರಿಯರನ್ನು ಹಾಗೆ ಮುಂದುವರಿಯಲು ಬಿಡುತ್ತಿಲ್ಲ. ಹಾಗೆ ಹಿಂಜರಿಯುತ್ತಿರುವುದರಿಂದ ನಮ್ಮ ಸಾಂಪ್ರದಾಯಿಕ ವೃತ್ತಿಗಳು ಕಣ್ಮರೆಯಾಗುತ್ತಿವೆ. ಸರಕಾರವು ಹಾಗಾಗದಂತೆ ತಡೆಯಲು ಕೌಶಲ್ಯ ತರಬೇತಿ ನೀಡುತ್ತಿರುವುದು ಸ್ವಾಗತಾರ್ಹ.

ಮನೆಯ ಪ್ರತಿಯೊಂದು ಕಾರಣಕ್ಕು ಗಂಡಸರಿಗೆ ಕೈ ಒಡ್ಡುವುದಿಲ್ಲ. ವಯಸ್ಸಿನ ಮಿತಿ ಇಲ್ಲದೇ ಅಬಾಲವೃದ್ಧರೂ ಕಾಯಕದಲ್ಲಿ ನಿರತರಾಗಿರುತ್ತಾರೆ. ಹೆಚ್ಚಿನ ಬಂಡವಾಳದ ಅಗತ್ಯವೂ ಇಲ್ಲ ಬೇಕಾದರೆ ಕೆಲಸ ಮಾಡುವ/ಬಿಡುವ ಅವಕಾಶ ಅವರಿಗಿದೆ. ಹೊತ್ತು ಹುಟ್ಟುವಲ್ಲಿ ಪ್ರಾರಂಭವಾದ ಕೆಲಸ ತಮ್ಮ ಮನೆ ಕೆಲಸ ಮಾಡಿಕೊಳ್ಳುತ್ತಲೆ ಮುಂದುವರಿದು ಹೊತ್ತು ಮುಳುಗುವವರೆಗೂ ನಡೆದೇ ಇರುತ್ತದೆ. ಯಾರ ನಿಯಂತ್ರಣವೂ ಇಲ್ಲದೆ. ಒಟ್ಟಿಗೆ ಹೆಂಗಳೆಯರೆಲ್ಲರೂ ಒಂದೆಡೆ ಕೂತು, ಮಾತು, ಹರಟೆಗಳಲ್ಲಿ ದಿನದ ಗೇಯ್ಮೆಯೂ ಆಗುತ್ತದೆ. ಗೌರವದಿಂದ ಬದುಕಲು ಇನ್ನೇನು ಬೇಕು. ಸ್ವಾವಲಂಬಿ ಸ್ವಾಭಿಮಾನದ ಬದುಕಿಗೆ ಬಿದಿರು ಅದೆಷ್ಟು ಆಸರೆ.

**– ಭಾರತಿ ಅಶೋಕ್ ಹೊಸಪೇಟೆ**

# ಮುಟ್ಟಿನ ಸಮಯದಲ್ಲಿ ಸಂಯಮ ಅಗತ್ಯ

## ಸ್ತ್ರೀರೋಗ ತಜ್ಞರಾದ ಡಾ.ಹೇಮಲತಾ, ಡಾ. ತನುಜಾ ಹುಬ್ಳಿ ಡಾ.ಸುಮಂಗಲ ಹೇಳಿಕೆ। ವಿಶ್ವ ಮಹಿಳಾ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಋತುಚಕ್ರ, ಮುಟ್ಟು ನಿಲ್ಲುವ ಹಾಗೂ ನಂತರದ ಸಮಯದಲ್ಲಿ ಮಹಿಳೆಯರ ಹಾರ್ಮೋನ್‌ಗಳ ಅಸಮತೋಲನದಿಂದ ಮಾನಸಿಕ ಬದಲಾವಣೆಗಳು ಸಹಜ ಆ ಸಮಯದಲ್ಲಿ ಪುರುಷರು ತಮ್ಮ ಸಂಗಾತಿಯೊಂದಿಗೆ ಸಹಾನುಭೂತಿಯಿಂದ ವರ್ತಿಸಿ ಆಕೆಗೆ ಅಸರೆಯಾಗಿ ನಿಲ್ಲುವುದು ಅತಿ ಅವಶ್ಯ ಎಂದು ಖ್ಯಾತ ವೈದ್ಯರ ಡಾ.ಹೇಮಲತಾ ಅಭಿಪ್ರಾಯಪಟ್ಟರು.

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪತಂಜಲಿಯೋಗ ಸಮಿತಿ, ಫ್ರೀಡಂ ಪಾರ್ಕ್ ಯೋಗ ಕೇಂದ್ರ ಸಂಯುಕ್ತವಾಗಿ ವಿಶೇಷವಾಗಿ ಮಹಿಳೆಯರಿಗಾಗಿ ಆಯೋಜಿಸಿದ್ದ ಯೋಗ ಶಿಬಿರದಲ್ಲಿ ಮಹಿಳೆಯ ಆರೋಗ್ಯ, ಪ್ರೌಢಾವಸ್ಥೆ, ಮುಟ್ಟಿನ ಸಮಯ, ಮುಟ್ಟು ನಿಂತ ಸಮಯ ಹಾಗೂ ನಂತರದ ದಿನಗಳಲ್ಲಿ ಹೆಣ್ಣಿನಲ್ಲಿ ಆಗುವ ದೈಹಿಕ ಮಾನಸಿಕ ಬದಲಾವಣೆಗಳ ಬಗ್ಗೆ ಯೋಗ ಸಾಧಕರೊಂದಿಗೆ ಸಂವಾದ ನಡೆಸಿದ ಅವರು ಡಾ.ಹೇಮಲತಾ, ಡಾ.ಸುಮಂಗಲ, ಡಾ. ತನುಜಾ ಹುಬ್ಳಿ ಅವರುಗಳು ಒಕ್ಕೊರಲಿನ ಅಭಿಪ್ರಾಯ ವ್ಯಕ್ತಪಡಿಸಿದರು.



ಡಾ.ತನುಜಾ ಹುಬ್ಳಿ ಮಾತನಾಡಿ, ಋತುಸ್ರಾವ ಆರಂಭ, ಅಂತ್ಯ ಹಾಗೂ ಮುಟ್ಟಿನ ಸಮಯದಲ್ಲಿ ಮಹಿಳೆಯರ ಮಾನಸಿಕ ಬದಲಾವಣೆ, ಖಿನ್ನತೆ, ಉದ್ವೇಗದ ಬಗ್ಗೆ ಅರಿತು ಹೆಚ್ಚಿನ ಒತ್ತಡಕ್ಕೊಳಗಾಗದೆ ಸಂಯಮದಿಂದ ಇರುವುದನ್ನು ಕಲಿಯಬೇಕು, ಮುಟ್ಟಿನ ಸಮಯದಲ್ಲಿ ಬರುವ ತಾತ್ಕಾಲಿಕ ನೋವುಗಳ ಬಗ್ಗೆ ಆತಂಕ ಬೇಕಿಲ್ಲ, ಪ್ರೌಢಾವಸ್ಥೆಯಲ್ಲಿ ಹೆಣ್ಣು ಮಕ್ಕಳಿಗೆ ದೈಹಿಕ ಬೆಳವಣಿಗೆ, ಅಸಹಜವೆಂದು ಕಂಡು ಬಂದಾಗ ಮುಚ್ಚಿಟ್ಟುಕೊಳ್ಳದೇ ವೈದ್ಯರೊಂದಿಗೆ ಸಮಾಲೋಚಿಸಿ ಪರಿಹಾರ ಪಡೆಯಿರಿ, ಅದರಂತೆ ಮಕ್ಕಳಿಗೆ ವಿದ್ಯೆಯೊಂದಿಗೆ ಸಂಸ್ಕಾರವನ್ನು ನೀಡುವುದು ಅತಿ ಅವಶ್ಯ ಎಂದರು.

ಡಾ.ಹೇಮಲತಾ ಮಾತನಾಡಿ ಗರ್ಭಾವಸ್ಥೆಯಲ್ಲಿ ಪೌಷ್ಠಿಕ ಆಹಾರ ಸೇವಿಸಿ, ಹೆಣ್ಣು23 ರಿಂದ 28– ವರ್ಷದೊಳಗೆ ಗರ್ಭ ಧರಿಸಲು ಅತಿ ಉತ್ತಮ, ಆ ಸಮಯದಲ್ಲಿ ಗರ್ಭಧರಿಸಿದರೆ ಆರೋಗ್ಯ ಪೂರ್ಣ ಮಗು ಪಡೆಯಲು ಸಾಧ್ಯ ಇಲ್ಲವಾದಲ್ಲಿ ಅನುವಂಶಿಕ ಕಾಯಿಲೆಗಳು ಬರುವ ಸಾಧ್ಯತೆ ಹೆಚ್ಚು, ಸಿನಿಮಾ ಹೀರೋಯಿನ್ ಗಳು ತಮ್ಮ ಅಂಡಾಣುಗಳನ್ನು ಸಂಗ್ರಹಿಸಿ ಶೇಖರಿಸಿಟ್ಟು ನಲವತ್ತರ ನಂತರ ಗರ್ಭ ಧರಿಸಲು ಬಳಸುತ್ತಾರೆ ಅವರನ್ನು ಅನುಸರಿಸುವುದು ಬೇಡ, ಎಲ್ಲದಕ್ಕೂ ವಯಸ್ಸಿನ ಇತಿಮಿತಿಯಿದ್ದು ವಯಸ್ಸಿಗನುಗುಣವಾಗಿ ನಡೆದರೆ ಒಳಿತು ಎಂದರು.

ಡಾ.ಸುಮಂಗಲ ಅವರು ಮಾತನಾಡಿ ಮುಟ್ಟು ನಿಂತ ನಂತರ ಹೃದಯಾಘಾತದ ಸಂಭವ ಪುರುಷರಿಗಿಂತ ಮಹಿಳೆಯರಿಗೆ ದುಪ್ಪಟ್ಟು ಇದೆ, ಆದ್ದರಿಂದ ಆರೋಗ್ಯಕ್ಕಾಗಿ ಯೋಗ, ವ್ಯಾಯಾಮ,ವಾಕಿಂಗ್ ಮಾಡಿ, ಒತ್ತಡಕ್ಕೊಳಗಾಗದೆ ಸದಾ ಖುಷಿ ಖುಷಿಯಾಗಿರುವುದನ್ನು ಕಲಿತು ಉತ್ತಮ ಜೀವನಶೈಲಿ ಅನುಸರಿಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪತಂಜಲಿ ಯೋಗ ಸಮಿತಿಯ ಮಂಗಳಮ್ಮ , ನಗರಸಭೆ ಮಾಜಿ ಅಧ್ಯಕ್ಷೆ ಸುಂಕಮ್ಮ, ಹೊಸಪೇಟೆ ಟೈಮ್ಸ್ ದಿನ ಪತ್ರಿಕೆಯ ಸಂಪಾದಕಿ ರೇಖಾ ಪ್ರಕಾಶ್, ಫ್ರೀಡಂ ಪಾರ್ಕ್ ನ ಉಸ್ತುವಾರಿಗಳಾದ ಅನಂತ ಜೋಷಿ, ಶ್ರೀರಾಮ, ಚಂದ್ರಿಕಾ, ಸುಜಾತಾ, ಪ್ರಮೀಳಮ್ಮ ಹಾಗೂ ಇತರರು ಇದ್ದರು. ಮಹಿಳಾ ಸಾಧಕಿಯರನ್ನು ಗೌರವಿಸಲಾಯಿತು. ಶೈಲಜ ಕಳಕಪ್ಪ ಯೋಗ ತರಗತಿ ಹಾಗೂ ಕಾರ್ಯಕ್ರಮ ನಿರ್ವಹಿಸಿದರು.

## ಬಾಲೆನಹಳ್ಳಿಯಲ್ಲಿ ನೂತನ ಆಂಜನೇಯ ದೇವಸ್ಥಾನದ ಬಾಗಿಲು ಪೂಜಾ



**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ಬಾಲೆನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡದ ಗರ್ಭಗುಡಿ ಬಾಗಿಲು ಪೂಜೆಯನ್ನು ಮಾಜಿ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ್ ನೆರವೇರಿಸಿದರು.

ಮಾಜಿ ಶಾಸಕರಾದ ಪಿ.ಟಿ.ಪರಮೇಶ್ವರ ನಾಯ್ಕ್ ಪೂಜೆ ನೆರವೇರಿಸಿ ಮಾತನಾಡಿ:- ಬಾಲೆನಹಳ್ಳಿ ನನಗೆ ತವರುಮನೆ ಇದ್ದ ಹಾಗೆ, ನಾನು ಅಧಿಕಾರದಲ್ಲಿ ಈಗ ಇಲ್ಲ, ಸರ್ಕಾರದಿಂದ ಈ ದೇವಸ್ಥಾನಕ್ಕೆ ಕೈಲಾದಷ್ಟು ಅನುದಾನ ತರಿಸಿ ಕೊಡುತ್ತೇನೆಂದು ಹೇಳಿದರು.

ಮುಖಂಡ ಯರಬಳ್ಳಿ ಉಮಾಪತಿ ಮಾತನಾಡಿ ಸಣ್ಣ ಗ್ರಾಮವಾದ ಈ ಬಾಲೇನಹಳ್ಳಿಯಲ್ಲಿ ಆಂಜನೇಯ ದೇವಸ್ಥಾನ ನಿರ್ಮಾಣ ವಾಗುತ್ತಿರುವುದು ಒಂದು ಹೆಮ್ಮೆಯ ವಿಷಯ.

ಯಾವುದೇ ಕಾರ್ಯಕ್ರಮಗಳು ನಡೆದರೆ ಈ ದೇವಸ್ಥಾನದಲ್ಲಿ ಮಾಡಬಹುದು, ಈ ಊರಲ್ಲಿ ಯಾವುದೇ ಕಾರ್ಯಕ್ರಮಗಳು ನಡೆದರು ಅಹಿತಕರ ಘಟನೆಗಳು ನಡೆದಿಲ್ಲ, ಈ ಆಂಜನೇಯ ದೇವಸ್ಥಾನಕ್ಕೆ ತನ್ನದೇ ಆದ ವಿಶೇಷತೆಯಿದೆ ಎಂದು ಹೇಳಿದರು.

ಮಾಜಿ ಗ್ರಾ. ಪಂ.ಅಧ್ಯಕ್ಷ ಬಾಲೆನಹಳ್ಳಿ ರಾಮನಗೌಡ ಮಾತನಾಡಿ ಬಹಳ ದಿನಗಳಿಂದ ನಮ್ಮ ಊರಿನಲ್ಲಿ ಆಂಜನೇಯ ದೇವಸ್ಥಾನ ನಿರ್ಮಾಣವಾಗುತ್ತಿರುವುದು ಕನಸು ನನಸಾಗಿದೆ, ಸುಮಾರು ಅಂದಾಜು 50 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ, ಗರ್ಭಗುಡಿ ಬಾಗಿಲು ಪೂಜೆ ಕಾರ್ಯಕ್ರಮಕ್ಕೆ ನನ್ನ ಗುರು ಪಿ.ಟಿ.ಪರಮೇಶ್ವರ ನಾಯ್ಕ್ ರವರು ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಹೆಮ್ಮೆಯ ವಿಷಯ.

ಈ ದೇವಸ್ಥಾನಕ್ಕೆ ಜಗಳೂರು, ಹರಪನಹಳ್ಳಿ ತಾಲೂಕಿನ ಮುಖಂಡರು ಸಹಕರಿಸಿದ್ದಾರೆ,ಈ ದೇವಸ್ಥಾನದ ಜವಾಬ್ದಾರಿ ನಾನು ತೆಗೆದುಕೊಂಡಿದ್ದೆ,ಈ ದೇವಸ್ಥಾನಕ್ಕೆ ಮಾಜಿ ಶಾಸಕ ಎಸ್. ವಿ. ರಾಮಚಂದ್ರಪ್ಪ 5 ಲಕ್ಷ ರೂಪಾಯಿ ನೀಡಿದ್ದಾರೆ, ಹಾಲಿ ಶಾಸಕ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ 10 ಲಕ್ಷ ನೀಡುತ್ತೇನೆಂದು ಭರವಸೆ ನೀಡಿದ್ದಾರೆ.

ಈ ದಿನ ಲೆಕ್ಕದ ಪುಸ್ತಕವನ್ನು ಒಪ್ಪಿಸುತ್ತೇನೆ ಎಂದು ಹೇಳಿದರು.

ವಿವಿಧ ವಾದ್ಯಗಳೊಂದಿಗೆ ಪಟಾಕಿ ಸಿಡಿಸುತ್ತಾ ಮಾಜಿ ಶಾಸಕ ಪಿ.ಟಿ.ಪರಮೇಶ್ವರ ನಾಯ್ಕ್ ರನ್ನುಅದ್ದೂರಿಯಾಗಿಸ್ವಾಗತಿಸಲಾಯಿತು,ಸುತ್ತ ಮುತ್ತಲಿನ ಊರಿನ ಮುಖಂಡರಿಗೆ ದೇವಸ್ಥಾನದ ವತಿಯಿಂದ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಪಿ.ಟಿ.ಭರತ್, ಯರಬಳ್ಳಿ ಉಮಾಪತಿ,ತೌಡೂರು ಕೆಂಚಪ್ಪ,ಶೆಟ್ಟಿನಾಯ್ಕ್, ಕ್ಯಾರಕಟ್ಟೆ ಕೊಟ್ರುಗೌಡ, ದೊಡ್ಡ ಶೇಖರಪ್ಪ,ಸಣ್ಣ ಶೇಖರಪ್ಪ,ಹಸೇನ್ ನಾಯ್ಕ್,ಕೂಮಲ್ಯಾ ನಾಯ್ಕ್, ರಾಜಪ್ಪ, ಹಾಲೇಶಪ್ಪ, ಪುಟ್ಟಪ್ಪ, ಮಂಜ್ಯಾನಾಯ್ಕ್, ಕೂಬ್ಯಾನಾಯ್ಕ್, ಬಾಲೆನಹಳ್ಳಿ ರಾಮನಗೌಡ, ಗ್ರಾಮದ ಮುಖಂಡರು ಹಾಗೂ ಸುತ್ತಮುತ್ತಲ ಊರಿನ ಮುಖಂಡರು ಹಾಜರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ
9448633038, Email:hampitimes@gmail.com




# ವರ ಕರುಣಿಸುವ ಜಗದೊಡೆಯನಿಗಿಲ್ಲ ಗರ್ಭಗುಡಿ ಜೀರ್ಣೋದ್ಧಾರ ಭಾಗ್ಯ

### ಹಂಪಿ ಅಂಗಳದ ಎರಡನೆ ಅತಿ ದೊಡ್ಡ ಶಿವಲಿಂಗ ! । ನೆಲಸಮಗೊಂಡ ಗರ್ಭಗುಡಿ, ಗೋಪುರ

### ಶಿವಾಲಯ ನಿರ್ವಹಣೆಗೆ ಅಂದೇ ಭೂಮಿ ಕಾಯ್ದಿರಿಸಿದ್ದರೂ ಕಾಳಜಿ ತೋರದ ಅಧಿಕಾರಿಗಳು

### ಆಕರ್ಷಕ, ಕಣ್ಮನ ತಣಿಸುವ ಶಿವಲಿಂಗ । ಜಿಲ್ಲಾ ಕೇಂದ್ರ ಹೊಸಪೇಟೆಯಿಂದ 5 ಕಿ.ಮೀ ದೂರ

### ಬಂಡೆ ಪ್ರದೇಶದಲ್ಲಿ ಬೇಸಿಗೆಯಲ್ಲೂ ಬತ್ತದ ಪುಷ್ಕರಣಿ । ಜಿಲ್ಲಾಧಿಕಾರಿಗಳತ್ತ ಚಿತ್ತನೆಟ್ಟ ಗ್ರಾಮಸ್ಥರು

**ಬಸಾಪುರ ಬಸವರಾಜ**
**ಹಂಪಿ ಟೈಮ್ಸ್ ಹೊಸಪೇಟೆ**

ಶಿವರಾತ್ರಿ ನಿಮಿತ್ತ ಜಗವೆಲ್ಲ ಶಿವನ ಆರಾಧನೆಯಲ್ಲಿ ತೊಡಗಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳಿಂದ ಮನುಷ್ಯ ನೆಮ್ಮದಿ ಕಂಡುಕೊಳ್ಳಲು ಸಾಧ್ಯ ಎಂಬ ಕಾರಣದಿಂದ ಅನೇಕ ದಾನಿಗಳು ಹೊಸ ಶಿವ ದೇವಾಲಯಗಳನ್ನು ನಿರ್ಮಿಸುತ್ತಿದ್ದಾರೆ. ಆದರೆ ಪುರಾತತ್ವ ಇಲಾಖೆಗೊಳಪಟ್ಟ ಹಂಪಿ ಅಂಗಳದಲ್ಲಿ ಐತಿಹಾಸಿಕ ಬೃಹತ್ ಶಿವಲಿಂಗವಿರುವ ದೇಗುಲ ಅನೇಕ ವರ್ಷಗಳ ಹಿಂದೆ ಗೋಪುರ ನೆಲಕಚ್ಚಿದ್ದರೂ ಜಿರ್ಣೋದ್ಧಾರ ಕಾರ್ಯ ಕೈಗೊಳ್ಳದಿರುವುದು ಇಲಾಖೆಯ ಕಾರ್ಯ ವೈಖರಿಗೆ ಕನ್ನಡಯಂತಿದೆ ಈ ದೇಗುಲ.





ಅಂದಿನ ಭಕ್ತರು ಗೋಪುಲ ಶಿಥಿಲಗೊಂಡಿರುವುದನ್ನು ಕಂಡು ಶಿವಲಿಂಗವನ್ನು ಗರ್ಭಗುಡಿಯಿಂದ ಪೂರ್ವದ ಮುಂಭಾಗಕ್ಕೆ ಸ್ಥಳಾಂತರಿಸಿದ್ದಾರೆ. ದಶಕಗಳ ಹಿಂದೆ ಪತ್ರಿಕೆಯಲ್ಲಿ ಹಂಪಿ ಅಂಗಳದಲ್ಲೊಂದು ಅನಾಥ ಶಿವಾಲಯ ಶೀರ್ಷಿಕೆಯಡಿ ಸುದ್ದಿ ಪ್ರಕಟಗೊಂಡ ಬಳಿಕ, ಶಿವಭಕ್ತರು ಮುಳ್ಳು ಗಿಡಗಳಿಂದ ಮುಚ್ಚಲ್ಪಟ್ಟಿದ್ದ ದೇಗುಲವನ್ನು ಸ್ವಚ್ಛಗೊಳಿಸಿ, ಭಕ್ತರೇ ಮುಂದಾಗಿ ಶಿವನಿಗೆ ಪೂಜೆ ಮಾಡುತ್ತಾ ಬಂದಿದ್ದಾರೆ ಹೊರತು ಇಂದಿಗೂ ಸಂಬಂಧಿಸಿದ ಇಲಾಖೆ ಇತ್ತ ಗಮನಹರಿಸಿಲ್ಲ. ಪುರಾತತ್ವ ಇಲಾಖೆಯಡಿ ಬರುವ ಈ ದೇಗಲುವನ್ನು ಜೀರ್ಣೋದ್ಧಾರ ಮಾಡಬೇಕಾದ ಇಲಾಖೆಯೇ ಕಣ್ಮುಚ್ಚಿ ಕುಳಿತಿದೆ. ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಶ್ರೀಕೃಷ್ಣದೇವರಾಯನ ತಾಯಿ ನಾಗಲಾಂಬಿಕೆ ಹೆಸರಲ್ಲಿ (ಈಗಿನ ನಾಗೇನಹಳ್ಳಿ) ಕಟ್ಟಿದ ಊರಲ್ಲಿ ನಿರ್ಮಿಸಿದ ಈ ಶಿವ ದೇವಾಲಯ ಜೀರ್ಣೋದ್ಧಾರ ಕಾಣದೇ ನಿರ್ಲಕ್ಷ್ಯಕ್ಕೀಡಾಗಿರುವುದು ಭಕ್ತರಲ್ಲಿ ಬೇಸರ ಮೂಡಿಸುತ್ತಿದೆ. ಶಿವನಿಗೆ ಪೂಜೆ ಸಲ್ಲಿಸಿದವರು ವರ ಕರುಣಿಸುವ ಶಿವನಿಗಿಲ್ಲವೇ ಜೀರ್ಣೋದ್ಧಾರ ಭಾಗ್ಯ ಎಂದು ನೋವಿನೊಂದಿಗೆ ಭಕ್ತರು ಮರಳುತ್ತಿದ್ದಾರೆ.

ಹೌದು, ವಿಜಯನಗರ ಜಿಲ್ಲಾ ಕೇಂದ್ರ ಹೊಸಪೇಟೆ ಕೂಗಳತೆಯಲ್ಲಿರುವ ನಾಗೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಜಯನಗರ ಅರಸ ಶ್ರೀಕೃಷ್ಣದೇವರಾಯನ ತಾಯಿ ನಾಗಲಾಂಬಿಕೆ ಹೆಸರಲ್ಲಿ ಈ ಗ್ರಾಮವನ್ನು ಅಂದಿನ ದೀಕ್ಷಿತ ಪಂಡಿತ ನಿರ್ಮಿಸಿ, ಅವರ ತಾಯಿಯ ಒಳಿತಿಗಾಗಿ ಈ ಗ್ರಾಮದಲ್ಲಿ ನಾಗೇಂದ್ರ ಶಿವಾಲಯ ಮತ್ತು ರಂಗನಾಥ ಎಂಬ ಎರಡು ಆಕರ್ಷಕ ಕಣ್ಮನ ತಣಿಸುವ ಸುಂದರ ಮೂರ್ತಿಗಳೊಂದಿಗೆ ದೇಗುಲಗಳನ್ನು ಮತ್ತು ಕೆರೆಯೊಂದನ್ನು ನಿರ್ಮಿಸಿದ್ದಾರೆ ಎಂಬುದು ಇತಿಹಾಸ.





ಹಂಪಿ ಅಂಗಳದಲ್ಲಿರುವ ಅನೇಕ ದೇಗುಲಗಳಲ್ಲಿ ವಿಗ್ರಹಗಳಿಲ್ಲದಿದ್ದರೂ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ. ಆದರೆ ಭಕ್ತರನ್ನು ಕೈಬೀಸಿ ಕರೆಯುವಂತಿರುವ ಪೂಜಿಸಲ್ಪಡುವ ವಿಗ್ರಹವಿರುವ ಈ ದೇಗುಲಗಳಿಗೆ ಈಗಿನ ಜನಪ್ರತಿನಿಧಿಗಳು ಹಾಗೂ ಜಿಲ್ಲಾಧಿಕಾರಿಗಳಾದರೂ ಜೀರ್ಣೋದ್ಧಾರ ಭಾಗ್ಯ ಕಲ್ಪಿಸುವರೋ ಕಾದು ನೋಡಬೇಕು..

**ಪುರಾತತ್ವ ಇಲಾಖೆಯಿಂದ ನಾಗೇನಹಳ್ಳಿ ಸಮೀಪದ ಶಿವ ದೇಗುಲ ಉದಾಸೀನ**

**ಪುರಾತನ ಶಿವಾಲಯ ಅಭಿವೃದ್ಧಿಗೆ ಭಕ್ತರ ಆಗ್ರಹ**

**ಭಕ್ತರಿಂದಲೇ ಶಿವನಿಗೆ ಪೂಜೆ**

## ಶ್ರೀರಾಮನೇ ಪ್ರತಿಷ್ಠಾಪಿಸಿದ ಶಿವಲಿಂಗಕ್ಕೆ ಪೂಜೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಹಿಂದುಗಳ ಪವಿತ್ರ ಹಬ್ಬ ಮಹಾ ಶಿವರಾತ್ರಿ ಅತ್ಯಂತ ಸಡಗರ ಸಂಭ್ರಮದಿಂದ ಶುಕ್ರವಾರ ನಡೆಯಿತು. ತಾಲೂಕಿನ ಪ್ರತಿ ಗ್ರಾಮಗಳಲ್ಲೂ ಬೆಳಿಗ್ಗೆಯಿಂದಲೇ ಪೂಜಾ, ವಿಧಿ ವಿಧಾನಗಳು ನಡೆದವು. ಎಲ್ಲಾ ಶಿವ ದೇವಾಲಯಗಳಲ್ಲಿ ಪಂಚಾಮೃತ ಅಭಿಷೇಕ ನಡೆದ ನಂತರ, ಶಿವನಿಗೆ ಬಿಲ್ವ ಪತ್ರೆ ಹಾಗು ನಾನಾ ಬಗೆಯ ಹೂಗಳಿಂದ ಅಲಂಕಾರ ಕೈಗೊಳ್ಳಲಾಗಿತ್ತು. ಬೆಳಿಗ್ಗೆಯಿಂದಲೇ ಭಕ್ತರು ಶುಚಿರ್ಭೂತರಾಗಿ ಮನೆ ಮಂದಿಯಲ್ಲ ಹೊಸ ಬಟ್ಟೆ ಧರಿಸಿ, ಶಿವನಿಗೆ ಪೂಜೆ ಸಲ್ಲಿಸಿ, ಇಷ್ಟವಾದ ಖಾದ್ಯಗಳನ್ನು ನೈವೇದ್ಯ ಮಾಡಿದರು.

ಪಟ್ಟಣದ ರಾಮಲಿಂಗೇಶ್ವರ ಹಾಗೂ ಸಿದ್ದಯ್ಯನ ಗುಡ್ಡದ ಸಿದ್ದಯ್ಯ ಸ್ವಾಮಿಗೆ ವಿಶೇಷ ಪೂಜೆ. ಶಿವರಾತ್ರಿ ಅಂಗವಾಗಿ ಪಟ್ಟಣದ ಇತಿಹಾಸ ಪ್ರಸಿದ್ಧ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನಕ್ಕೆ ವಿದ್ಯುತ್ ಅಲಂಕಾರ ಮಾಡಲಾಗಿತ್ತು. ಶುಕ್ರವಾರ ಬೆಳಿಗ್ಗೆಯಿಂದಲೇ ಅರ್ಚಕರು ರಾಮ ಲಿಂಗೇಶ್ವರ ಸ್ವಾಮಿಗೆ ಅಭಿಷೇಕ ಮಾಡಿ ಬಿಲ್ವಪತ್ರೆ ಸಮೇತ ನಾನಾ ಬಗೆಯ ಹೂಗಳಿಂದ ಅಲಂಕಾರ ಮಾಡಿದ್ದರು. ಸೀತಾ ಅಪಹರಣವಾದಗ ಸೀತೆಯನ್ನು ಹುಡುಕ ಹೊರಟ ರಾಮನಿಗೆ ಮಾರ್ಗ ಮಧ್ಯದಲ್ಲಿ ಕೂಡ್ಲಿಗಿ ಪಟ್ಟಣಕ್ಕೆ ಆಗಮಿಸಿ ಪ್ರಭು ಶ್ರೀರಾಮನೇ ಲಿಂಗ ಪ್ರತಿಷ್ಟಾಪಿಸಿ ಪೂಜಿಸಿದ ಕಾರಣ ರಾಮ ಲಿಂಗೇಶ್ವರ ಎನ್ನುವ ಐತಿಹ್ಯವಿದೆ. ಆದ್ದರಿಂದ ರಾಮಲಿಂಗೇಶ್ವರ ದರ್ಶನಕ್ಕೆ ಪಟ್ಟಣದ ಭಕ್ತರು ಬೆಳಿಗ್ಗೆಯಿಂದಲೇ ಸರದಿ ಸಾಲಿನಲ್ಲಿ ಬಂದು ದರ್ಶನ ಪಡೆದು ಪುನೀತರಾದರು. ಶಿವರಾತ್ರಿ ಅಂಗವಾಗಿ ರಾತ್ರಿ ಅಖಂಡ ಭಜನೆ ನಡೆಸಿ ಆಗಮಿಸುವ ಭಕ್ತರಿಗೆ ಪ್ರಸಾದ ವಿತರಣೆ ಮಾಡಿದರು. ಇತಿಹಾಸ ಪ್ರಸಿದ್ಧ ಸಿದ್ದಯ್ಯನ ಗುಡ್ಡದ ಸಿದ್ದಯ್ಯನಿಗೂ ಭಕ್ತರು ವಿಶೇಷ ಪೂಜೆ ನಡೆಸಿದರು. ದರ್ಶನಕ್ಕೆ ಆಗಮಿಸಿದ ಭಕ್ತರಿಗೆ ಪಾನಕ ವಿನಿಯೋಗ ಮಾಡಿ, ರಾತ್ರಿ ಅಖಂಡ ಭಜನೆ ನಂತರ ಶನಿವಾರ ಬೆಳಿಗ್ಗೆ ಮಹಾ ದಾಸೋಹ ನಡೆಸುವರು. ಪಟ್ಟಣದ ಚಿದಂಬರೇಶ್ವರ ಹಾಗೂ ಬಸವ ಲಿಂಗೇಶ್ವರ ಸ್ವಾಮಿಗೂ ವಿಶೇಷ ಪೂಜೆ ಮಾಡಿ ಭಕ್ತರು ಕೃತಾರ್ಥರಾದರು.



ಶಿವರಾತ್ರಿ ಅಂಗವಾಗಿ ಶುಕ್ರವಾರ ಪಟ್ಟಣದ ಇತಿಹಾಸ ಪ್ರಸಿದ್ಧ ರಾಮಲಿಂಗೇಶ್ವರ ಸ್ವಾಮಿಗೆ ಹೂವಿನ ಅಲಂಕಾರ ಮಾಡಿರುವುದು.

## ಬಳ್ಳಾರಿ ಮಹಾನಗರ ಪಾಲಿಕೆಗೆ ರಾಜ್ಯ ಮಟ್ಟದ ಪ್ರಶಸ್ತಿ ಗರಿ



**ಹಂಪಿ ಟೈಮ್ಸ್ ಬಳ್ಳಾರಿ**

ಡೇ ನಲ್ಮ್ ಯೋಜನೆಯಡಿ ಪಿಎಂ ಸ್ವನಿಧಿ (ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಯೋಜನೆ) ಹಾಗೂ ನಿರಾಶ್ರಿತರಿಗೆ ಆಶ್ರಯ ಕೇಂದ್ರದ ಸೌಲಭ್ಯ (Night Shelter) ಈ ಎರಡು ಯೋಜನೆಯಲ್ಲಿ ಅತ್ಯುತ್ತಮ ಗುರಿ ಸಾಧನೆಗೆ ಬಳ್ಳಾರಿ ಮಹಾನಗರ ಪಾಲಿಕೆಗೆ 2 ರಾಜ್ಯ ಪ್ರಶಸ್ತಿಗಳು ಲಭಿಸಿವೆ. ರಾಜ್ಯ ಸರ್ಕಾರದ ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಡೇ ನಲ್ಮ್ ಯೋಜನೆಯಡಿ ಪಿಎಂ ಸ್ವನಿಧಿ ಬೀದಿ ಬದಿ ವ್ಯಾಪಾರಿಗಳಿಗೆ ನೀಡಲಾಗುವ ಸಾಲ ಯೋಜನೆಯಡಿ ಸಮರ್ಪಕ ಅನುಷ್ಠಾನದಲ್ಲಿ ಪ್ರಥಮ ಸ್ಥಾನ ಪಡೆದ ಬಳ್ಳಾರಿ ಮಹಾನಗರ ಪಾಲಿಕೆಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅದೇ ರೀತಿಯಾಗಿ ಡೇ ನಲ್ಮ್ ಯೋಜನೆಯಡಿ ನಿರಾಶ್ರಿತರ ಕೇಂದ್ರದ ಉತ್ತಮ ನಿರ್ವಹಣೆಗಾಗಿ ಬಳ್ಳಾರಿ ಮಹಾನಗರ ಪಾಲಿಕೆಗೆ ಇನ್ನೊಂದು ಪ್ರಶಸ್ತಿಯನ್ನು ನೀಡಲಾಯಿತು. ಎರಡು ಪ್ರಶಸ್ತಿಗಳನ್ನು ಕೌಶಲ್ಯಾಭಿವೃದ್ಧಿ ಇಲಾಖೆಯ ಅಪರ ಕಾರ್ಯದರ್ಶಿಗಳಾದ ಉಮಾ ಮಹಾದೇವನ್ ಮತ್ತು ನಲ್ಮ್ ಅಭಿಯಾನ ನಿರ್ದೇಶಕರಾದ ಶ್ರೀವಿದ್ಯಾ ಅವರು ವಿತರಿಸಿದರು. ಪಾಲಿಕೆಯ ಯೋಜನಾ ನಿರ್ದೇಶಕ ದೇವರಾಜ ಸ್ವೀಕರಿಸಿದರು. ಅಭಿಯಾನ ವ್ಯವಸ್ಥಾಪಕಿ ಸೌಮ್ಯ, ಪಾಲಿಕೆಯ ಪುಷ್ಪಲತಾ, ಮಾಬುನಿ ಹಾಜರಿದ್ದರು.

## ವಸ್ತು ಪ್ರದರ್ಶನ ಮಳಿಗೆ ಎಡಿಸಿ: ಮೊಹಮ್ಮದ್ ಝುಬೇರ್ ಉದ್ಘಾಟನೆ

**ಹಂಪಿ ಟೈಮ್ಸ್ ಬಳ್ಳಾರಿ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು, ಇತರೆ ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲು ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಏರ್ಪಡಿಸಿರುವ ಮೂರು ದಿನಗಳ (ಮಾ.08 ರಿಂದ 10 ರವರೆಗೆ) ವಸ್ತು ಪ್ರದರ್ಶನ ಮಳಿಗೆಯನ್ನು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಶುಕ್ರವಾರ ಉದ್ಘಾಟಿಸಿದರು.



ಬಳಿಕ ಮಾತನಾಡಿದ ಅವರು, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಾದ ಶಕ್ತಿಯೋಜನೆ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಅನ್ನಭಾಗ್ಯ ಸೇರಿದಂತೆ ಸರ್ಕಾರದ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.

ರಾಜ್ಯ ಸರ್ಕಾರವು ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಲು ಮತ್ತು ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ನೀಡಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಕೇಂದ್ರ ಬಸ್ ನಿಲ್ದಾಣದಲ್ಲಿ ವಸ್ತು ಪ್ರದರ್ಶನ ಮಳಿಗೆಯನ್ನು ಹಾಕಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಾಹಿತಿ ಪಡೆಯಬಹುದಾಗಿದೆ ಎಂದರು.

ಬೇಕಾಗಿದ್ದಾರೆ
ಪಾರ್ಟ್ ಟೈಮ್ / ಫುಲ್ ಟೈಮ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
ಕುಶಾಲ್ ಟೆಲಿ ಮೊಬೈಲ್ಸ್
Wholesale Dealers in All Brands second hand Mobiles
ರಾಮಾ ಟಾಕೀಸ್ ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ–583201
M:99029 00085

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA